DISCUSSION ON A MATTER REGARDING LEVY OF WATER RATE

† ಶ್ರೀ ಕೆ. ಹೆಚ್. ಶ್ರೀನಿವಾಸ್ (ಸಾಗರ):—ಅಧ್ಯಕ್ಷರೇ ೨೪ನೇ ಮಾರ್ಚ್ ೧೯೭೦ ರಲ್ಲಿ ಒಂದು ಸೂಚನೆಯನ್ನು ಕಳುಹಿಸಿದ್ದೆ. ಕೆಲವೊಂದು ಭಾಗದಲ್ಲಿ ಭೂ ಕಂದಾಯ ವಸೂಲಿಬಗ್ಗೆ ಅಧಿಕಾರಿಗಳು ಕೈಕೊಂಡ ಕ್ರಮದ ಬಗ್ಗೆ ಹಿಂದೆ ಪ್ರಸ್ತಾಪಮಾಡಿ ಹೇಳಿದ್ದೆ. ಆಗ ನಾನು ಹೇಳಿದ ವಿಷಯ ಈಗ ಪ್ರಸ್ತಾಪ ಮಾಡುವ ವಿಷಯಕ್ಕಿಂತ ಭಿನ್ನವಾದ್ದದು. ಹುಣಸೂರು ಜೋನ್, ಚಿಕ್ಕಮಗಳೂರು ಹಾಸನ ಜೋನ್ ಶಿವಮೊಗ್ಗ, ಬಿಜಾಪುರದ ಜೊನ್ ಇವುಗಳಲ್ಲಿ ಇತ್ತೀಚೆಗೆ ಈ ಸದನದಲ್ಲಿ ಪಾಸ್ ಆಗಿರತಕ್ಕ ೧೧೪ ಎ ಸೆಕ್ಷನ್ ಪ್ರಕಾರ ಹೊಸ ರಿವಿಜನ್‌ಗೆ ಆರ್ಡರ್ ಮಾಡಿದ್ದಾರೆ. ಶಿವಮೊಗ್ಗ ಜೋನ್ ಒಂದರಲ್ಲೇ ತೀರ್ಥಹಳ್ಳಿ, ಸಾಗರ, ಸೊರಬ, ಶೃಂಗೇರಿ ಮತ್ತು ಶಿಕಾರಿಪುರ ತಾಲ್ಲೂಕುಗಳು ಬರುತ್ತವೆ. ಅಲ್ಲಿ ರೆವಿನ್ಯೂ ಅಧಿಕಾರಿಗಳು ಹೊಸ ಕಂದಾಯ ದರದ ಪ್ರಕಾರ ಪಟ್ಟಿಮಾಡಿ ಐದು ವರ್ಷಗಳ ವಾಟರ್ ರೇಟನ್ನು ಮೊತ್ತ ಮಾಡಿ ಕೊಡಬೇಕೆಂದು ನೋಟೀಸ್ ಜಾರಿ ಮಾಡಿ ಅವರ ಮೇಲೆ ಬಲಾತ್ಕಾರವಾಗಿ ಕ್ರಮಗಳನ್ನು ನಡೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಯಾವ ಯಾವ ಜೋನ್‌ನಲ್ಲಿ ರಿವಿಜನ್ ಹೊಸದಾಗಿ ಮಾಡಬೇಕೆಂದು ಸರಕಾರದವರು ಆರ್ಡರ್ ಮಾಡಿದ್ದಾರೋ ಅಲ್ಲಿ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅದು ಕ್ರೋಡೀಕೃತ ಕಂದಾಯ ಸೆಟಲ್‌ಮೆಂಟ್ ಪೂರ್ವದಲ್ಲಿ ಯಾವ ದರ ಇತ್ತೋ ಅದರ ಪ್ರಕಾರ ಕೇಳಲಿಕ್ಕೆ ಸಾಧ್ಯ. ಈ ವಾಟರ್ ರೇಟ್ ಬೇರೆ, ಕಂದಾಯ ಬೇರೆ ಎಂದು ಇಲ್ಲದೆ ಇರುವಾಗ ವಾಟರ್ ರೇಟ್ ಕೇಳುವ ಪ್ರಶ್ನೆ ಉದ್ಭವಿಸುವುದಿಲ್ಲ. ಈ ರೀತಿ ಕಾನೂನು ಸ್ಪಷ್ಟವಾಗಿದ್ದರೂ ಕೂಡ ಯಾವುದೋ ಒಂದು ರೀತಿಯ ಕಲ್ಪನೆಯಿಂದ ರೆವಿನ್ಯೂ ಅಧಿಕಾರಿಗಳು ಈ ರೀತಿ ಐದು ವರ್ಷಗಳ ವಾಟರ್ ರೇಟ್ ಮತ್ತು ಹೊಸ ಕಂದಾಯ ದರದ ಮೊತ್ತ ಮಾಡಿ ಜನಗಳು ಕೊಡಬೇಕೆಂದು ಈ ಜೋನಿನಲ್ಲಿ ಒತ್ತಾಯಮಾಡುತ್ತಿದ್ದಾರೆ, ಇದು ಕಾನೂನು ಬಾಹಿರವಾದದ್ದು. ಸಾಗರ ಜಿಲ್ಲೆಯಲ್ಲಿ ೨೦ ಸಾವಿರ ಜನ ಹೈಕೋರ್ಟಿನಲ್ಲಿ ರಿಟ್ ಹೋಗುವ ಪ್ರಸಂಗ ಇದೆ. ಆದುದರಿಂದ ಸರಕಾರದವರು ತಕ್ಷಣ ಕಾನೂನು ಪ್ರಕಾರ ಕೇಳತಕ್ಕದು ನ್ಯಾಯವಾಗುತ್ತದೆ ಎಂದು ಸ್ಪಷ್ಟ ಪಡಿಸಬೇಕು. ಸಂಬಂಧಪಟ್ಟ ಜೋನ್‌ಗಳಿಗೆ ಮತ್ತು ಜಿಲ್ಲಾಧಿಕಾರಿಗಳಿಗೆ ಮುಖ್ಯವಾಗಿ ನನಗೆ ಸಂಬಂಧಪಟ್ಟ ಶಿವಮೊಗ್ಗ ಜಿಲ್ಲಾಧಿಕಾರಿಗಳಿಗೆ ತಕ್ಷಣ ಅವಶ್ಯಕವಾದಂಥ ಇನ್‌ಸ್ಟ್ರಕ್ಷನ್ಸ್‌ಗಳನ್ನು ಕಳುಹಿಸಿ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಒತ್ತಾಯಮಾಡುತ್ತೇನೆ.

‡ ಶ್ರೀ ಎಸ್. ಶಿವಪ್ಪ:—ಭೂಕಂದಾಯದ ವಿಚಾರವಾಗಿ ಈ ಸಭೆಯಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಬಹಳ ದಿವಸಗಳಿಂದಲೂ ಕೂಡ ಚರ್ಚೆ ನಡೆಯುತ್ತಾ ಇದೆ. ಚರ್ಚೆ ನಡೆದಾಗ ನಮ್ಮ ಕಂದಾಯ ಸಚಿವರು ಯಾವುದಾದರೂ ಒಂದು ರೀತಿ ಹೇಳಿಕೆ ಕೊಟ್ಟು ನಮ್ಮನ್ನು ತಾತ್ಕಾಲಿಕವಾಗಿ ವಂಚಿಸಿ ಅದನ್ನು ಕಾರ್ಯಗತ ಮಾಡದೆ ರೈತರ ಸ್ಥಿತಿ ಬಹಳ ಸಂಕಟ ಪರಿಸ್ಥಿತಿಗೆ ಬಂದಿದೆ. ೧೯೬೪-೬೫ನೇ ಇಸವಿಯಿಂದ ಈಚೆಗೆ ಕಂದಾಯ ಪದ್ಧತಿಯನ್ನು ಬೇರೆ ಬದಲಾಯಿಸಿ ಈ ಕಂದಾಯವನ್ನು ಹೊಸ ರೀತಿ ಅಸೆಸ್ ಮಾಡಿ ಹೊಸ ಕಂದಾಯದ ಪ್ರಕಾರ ಕಂದಾಯವನ್ನು ಏರಿಸಿದ್ದಾರೆ. ಆ ಕಂದಾಯದ ಏರಿಕೆಯ ಫಲವಾಗಿ ಎಂದೂ ಕಾಣದೆ ಇರತಕ್ಕ ಸತ್ಯಾಗ್ರಹ ಆಚರಣೆ ಮಾಡಿದ್ದೇವೆ. ಹೀಗೆ ಶಾಸನ ಸಭೆಯ ಹೊರಗೂ, ಒಳಗೂ ಸತ್ಯಾಗ್ರಹ ಮಾಡುವ ಮುಖಾಂತರ ಈ ವಿಷಯವನ್ನು ಸಭೆಯ ಗಮನಕ್ಕೆ ತಂದೆವು. ಆದರೆ ಸರಕಾರದವರು ನಾವು ಹೇಳಿದ್ದಕ್ಕೆ ಗಮನಕೊಡದೆ ತಾವು ಮಾಡಿದ್ದನ್ನೇ ಮುಂದುವರಿಸಿಕೊಂಡು ಬಂದಿದ್ದಾರೆ. ಕಂದಾಯದ ರಿಯಾಯಿತಿಯನ್ನು ಇದುವರೆಗೂ ಜನತೆಗೆ ಕೊಡಲಿಲ್ಲ, ಮಾನ್ಯ ಶ್ರೀನಿವಾಸರು ಹೇಳಿದ ಹಾಗೆ ವಾಟರ್ ರೇಟ್, ಬೆನಿಫಿಟ್ ಲೆವಿ, ಮತ್ತು ಕಾಂಟ್ರಿಬ್ಯೂಷನ್ ಈ ತರಹ ನಾಲ್ಕೈದು ಎಲ್ಲವನ್ನೂ ಕೂಡ ಹೊಸ ರೀತಿಯಲ್ಲಿ ಏರ್ಪಾಡು ಮಾಡುವ ಮುಖಾಂತರ, ವಾಟರ್ ರೇಟ್, ಬೆನಿಫಿಟ್ ಕಂದಾಯ ಹಾಕುವ ಜೊತೆಗೆ ಎಲ್ಲವನ್ನು ಒಂದಕ್ಕೆ ಐದರಷ್ಟು ಜಾಸ್ತಿ ಮಾಡಿ, ಹೀಗೆ ಜಾಸ್ತಿ ಆದ ಕಂದಾಯವನ್ನು ಐದು ವರ್ಷಗಳ ಬಾಕಿ ಒಂದೇ ಸಾರಿ ಕೊಡಬೇಕೆಂದು ರೈತರಿಗೆ ನೋಟೀಸ್ ಕೊಟ್ಟಿದ್ದಾರೆ. ಇದರಿಂದಾಗಿ ನಾಲ್ಕೈದು ಎಕರೆ ಇರುವ ರೈತ ವಾಟರ್ ರೇಟ್ ಐದು ವರ್ಷಗಳದ್ದು ಸೇರಿಸಿದರೆ ಒಂದು ಸಾವಿರ ರೂಪಾಯಿ ಕೊಡಬೇಕಾಗುತ್ತದೆ. ಹೀಗೆ ದುಬಾರಿಯಾದ ಡಿಮ್ಯಾಂಡ್ ನೋಟೀಸ್ ಕೊಟ್ಟಿದ್ದಾರೆ. ರೈತರು ಕಂದಾಯ ಕೊಡುವ ಪರಿಸ್ಥಿತಿಯಲ್ಲಿ ಇಲ್ಲ. ಹೊಸ ವಾಟರ್ ರೇಟ್ ಕಂದಾಯ ಏನಿದೆ ಅದನ್ನು ತೆಗೆದು ಹಿಂದೆ ಇದ್ದ ಹಾಗೆ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ತರಿ, ಖುಷ್ಕಿ, ಬಾಗಾಯ್ತು ಮೂರು ತರಹ ಕಂದಾಯವನ್ನು ಮುಂದುವರಿಸಿ ಕೊಂಡು ಹೋಗಬೇಕು. ಸಂಬಂಧ ಪಟ್ಟ ಕಾನೂನಿಗೆ ಅವಶ್ಯ ತಿದ್ದುಪಡಿ ಸೂಚನೆ ಮಾಡಿ ಹಿಂದೆ ಇದ್ದಂತೆ ಒಂದೇ ವಿಧವಾದ ಕಂದಾಯ ಹಾಕುವ ಪದ್ಧತಿ ತಂದರೆ ಅನುಕೂಲವಾಗುತ್ತದೆ. ಈಗಿನಂತೆ ಹೊಸ

(ಶ್ರೀ ಎಸ್. ಶಿವಪ್ಪ)

ಬದಲಾವಣೆಯನ್ನು ಮುಂದುವರಿಸಿಕೊಂಡು ಹೋದರೆ ಅದರಿಂದ ಅನಾಹುತವಾಗುತ್ತದೆ. ರೈತನಿಗೆ ಬೆಳೆ ಬೆಳೆಯುವುದಕ್ಕೆ ಉತ್ಸಾಹ ಇರುವುದಿಲ್ಲ. ಯಾಕೆಂದರೆ ಬೆಳೆದದ್ದು ಕಂದಾಯಕ್ಕೆ ಸಾಕಾಗುತ್ತದೆ. ಯಾಕೆ ಬೆಳೆಯಬೇಕು ಎಂಬ ತಾತ್ಸಾರಮನೋಭಾವ ಉಂಟಾಗುತ್ತದೆ. ಆದುದರಿಂದ ಹೊಸ ಪದ್ಧತಿ ಏನು ಇದೆ ಅದನ್ನು ರದ್ದುಮಾಡಿ ಹಿಂದಿನ ಕಂದಾಯವನ್ನೇ ಕೊಡುವಂತೆ ಮಾಡಬೇಕು. ೧೯೬೫-೬೬ ರಿಂದ ದೇಶದಲ್ಲಿ ಸತತವಾಗಿ ನಾಲ್ಕೈದು ವರ್ಷಗಳಿಂದ ಭೀಕರವಾದ ಕ್ಷಾಮ ಬಂತು. ಜಾಸ್ತಿ ಬೆಳೆ ಇಲ್ಲದೆ ರೈತ ಬೇಸತ್ತು ಚಿಂದಾಗಿ ಹೋಗಿದ್ದಾನೆ. ಕಂದಾಯ ರದ್ದು ಮಾಡಿ ಎಂದರೆ ಸಕಾಲದಲ್ಲಿ ರೆಕಾರ್ಡ್ ಬಂದಿಲ್ಲ ಎಂದು ಹೇಳುತ್ತಿದ್ದಾರೆ. ನಾನು ಹೇಳುವುದೂ ಕೂಡ ೧೯೬೫ ರಿಂದ ಈಚೆಗೆ ಮೂರು ವರ್ಷಗಳ ಕಾಲದಲ್ಲಿ ವಿಲೇಜ್ ಪಂಚಾಯಿತಿಗಳಲ್ಲಿ ಶಾನುಭೋಗರು ಇರಲಿಲ್ಲ. ಇದು ಒಂದು ಟ್ರಾನ್ಸಿಷನ್ ಪೀರಿಯೆಡ್. ಗ್ರಾಮಾಧಿಕಾರಿಗಳ ಹುದ್ದೆಗಳನ್ನು ರದ್ದು ಮಾಡಿದಿರಿ. ಗ್ರಾಮಾಧಿಕಾರಿಗಳ ಬದಲಾಗಿ ಪಂಚಾಯಿತಿ ಸೆಕ್ರಟರಿಗಳನ್ನು ನೇಮಕಮಾಡುವುದು ವಿಳಂಬವಾದುದರಿಂದ ಅಲ್ಲಿ ಲೆಕ್ಕ ಬರೆಯತಕ್ಕ ಅಧಿಕಾರಿಗಳು ಇಲ್ಲ. ಮೂರುವರ್ಷಗಳಿಂದ ಅಂಕಿ ಅಂಶಗಳು ಶೇಕರಿಸಿಲ್ಲ. ಪಹಣಿ ಆಧಾರದ ಮೇಲೆ ಎಲ್ಲಿ ಬೆಳೆ ಸರಿಯಾಗಿ ಆಗಿಲ್ಲವೋ ಅಂತಹ ಕಡೆ ವಿನಾಯಿತಿ ಕೊಡಬೇಕು ಎಂದು ಹೇಳುತ್ತೀರಿ. ಆದರೆ ಕರಾರುವಾಕ್ಕಾಗಿ ಎಲ್ಲಿ ಅಭಾವ ಇದೆ ಎನ್ನುವುದು ಜಿಲ್ಲಾ ಮಟ್ಟದಲ್ಲಿ ರಿಕಾರ್ಡು ಸಿಕ್ಕುತ್ತದೆ. ರೆವಿನ್ಯೂ ಮಂತ್ರಿಗಳು ಖುದ್ದಾಗಿ ರೆಕಾರ್ಡ ತರಿಸಿಕೊಂಡು ಆಖೈರು ತೀರ್ಮಾನ ಕೊಡತಕ್ಕ ಏರ್ಪಾಡು ಮಾಡದೆ ಹೋದರೆ ಜಿಲ್ಲೆಯಲ್ಲಿರುವ ರೈತರಿಗೆ ರೆವಿನ್ಯೂ ಅಧಿಕಾರಿಗಳು ನಾಲ್ಕು ವರ್ಷಗಳ ಕಂದಾಯ ಒಂದೇ ಸಾರಿ ಕೊಡಬೇಕೆಂದು ಹೇಳಿ ರೈತರಿಗೆ ತೊಂದರೆ ಕೊಡಲು ಅವಕಾಶವಾಗುತ್ತದೆ. ಆದುದರಿಂದ ಸಂಬಂಧಪಟ್ಟ ಡೆಪ್ಯುಟಿ ಕಮೀಷನರು ತಹಸೀಲದಾರರಿಂದ ಲೆಕ್ಕ ತರಿಸಿಕೊಂಡ ಕೂಡಲೇ ಕಂದಾಯವನ್ನು ಮನ್ನಾ ಮಾಡುವ ವಿಚಾರ ಮಾಡದೇ ಹೋದರೆ ರೈತನಿಗೆ ದೊಡ್ಡ ಹೊರೆ ಬಿದ್ದು ಕಷ್ಟವಾಗುತ್ತದೆ. ಕಂದಾಯ ಸಚಿವರು ಆಶ್ವಾಸನೆಯನ್ನು ಕೊಟ್ಟರೂ ರೈತರ ಕಷ್ಟ ಪರಿಹಾರವಾಗಿಲ್ಲ. ಆದುದರಿಂದ ಕಂದಾಯವನ್ನು ಮನ್ನಾ ಮಾಡುವ ಮುಖಾಂತರ ರೈತರ ಕಷ್ಟವನ್ನು ಪರಿಹಾರ ಮಾಡಬೇಕೆಂದು ಕೇಳುತ್ತೇನೆ. ಶಾಸನಸಭೆಯಲ್ಲಿ ಲ್ಯಾಂಡ್‌ರೆವಿನ್ಯೂ ಕೋಡನ್ನು ತಿದ್ದುಪಡಿ ಮಾಡಿದ್ದಾರೆ. ಅಲ್ಲೆಲ್ಲ ಕಂದಾಯದ ಹೊರೆ ಜಾಸ್ತಿಯಾಗಿಯೇ ಅಂತ ಸ್ಥಳದಲ್ಲಿ ರೈತ ಡೆಪ್ಯುಟಿ ಕಮೀಷನರಿಗೆ ಅರ್ಜಿ ಹಾಕಿದರೆ ಅವರು ಪುನಃ ವಿಮರ್ಶೆ ಮಾಡಿ ಕಂದಾಯವನ್ನು ಕಡಿಮೆ ಮಾಡುತ್ತಾರೆ ಎಂದು ಹೇಳುತ್ತೀರಿ. ಆದರೆ ರೈತನಿಗೆ ಅಪೀಲ್ ಮಾಡಬೇಕು ಎನ್ನುವ ಜ್ಞಾನ ಇಲ್ಲ. ಹೊಸ ಕಾನೂನನ್ನು ಅಮೆಂಡ್ ಮಾಡಿ ಹಳೆ ರೇಟ್ ಏನಿದೆ ಅದನ್ನು ಹಿಂದಿನ ಪದ್ಧತಿ ಪ್ರಕಾರ ಮುಂದುವರಿಸ ತಕ್ಕದ್ದು ಸಾಧ್ಯವಾದದ್ದು ಎಂದು ಹೇಳುತ್ತೇನೆ. ನಾನು ಇನೂ ಮುಂದೆ ಹೋಗುತ್ತೇನೆ. ಅನ್‌ಎಕನಾಮಿಕ್ಸ್ ಹೋಲ್ಡಿಂಗ್ಸ್ ಕಂದಾಯವನ್ನು ವಜಾಮಾಡಬೇಕೆಂದು ಹೇಳುವವರಲ್ಲಿ ನಾನು ಒಬ್ಬ. ಹಿಂದಿನ ಪದ್ಧತಿ ಪ್ರಕಾರ ತರಿ, ಖುಷ್ಕಿ ಬಾಗಾಯ್ತು ದರಗಳನ್ನು ಮುಂದುವರಿಸಿಕೊಂಡು ಮಳೆಬಾರದೆ ಇರುವ ಪ್ರದೇಶಗಳಿಗೆ ಕಂದಾಯ ಮನ್ನಾ ಮಾಡುವ ವಿಚಾರವನ್ನು ರೆವಿನ್ಯೂ ಮಂತ್ರಿಗಳು ಖುದ್ದಾಗಿ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

† ಶ್ರೀ ಪಂಚಿ ಶಿವಣ್ಣ (ತರೀಕೆರೆ) :—

ಸ್ವಾಮಿ, ಇದುವರೆಗೂ ಆಗಿರತಕ್ಕ ಕೆಲವು ವಿಷಯಗಳನ್ನು ನೋಡಿದರೆ ಸರ್ಕಾರ ರೈತರ ಮೇಲೆ ಒಂದು ದೊಡ್ಡಹೊರೆಯನ್ನು ಹೊರೆಸುತ್ತಾ ಇರುವ ಹಾಗೆ ಭಾಸವಾಗುತ್ತಾ ಇದೆ. ನಮ್ಮ ತಾಲ್ಲೂಕಿನಲ್ಲಿ ೪ ವರ್ಷಗಳಿಂದ ಮಳೆ ಇಲ್ಲ, ಹೋದ ವರ್ಷ ಕ್ಷಾಮ ಪ್ರದೇಶ ಎಂದು ಸರ್ಕಾರದವರೇ ಸಾರಿದರು. ಹೋದ ವರ್ಷ ಸೆಪ್ಟಂಬರ್ ತಿಂಗಳಿನಿಂದೀಚೆಗೆ ಮಳೆ ಬಂದಿದೆ, ಇಂತಹ ಸಂದರ್ಭದಲ್ಲಿ ೫ ವರ್ಷಗಳಿಂದ ಇರತಕ್ಕ ಕಂದಾಯದ ಬಾಕಿಯನ್ನು ವಸೂಲು ಮಾಡಲಿಕ್ಕೆ ಹೊರಟಿದ್ದಾರೆ. ಕಂದಾಯ ಕೊಡಬೇಕೆಂದು ಒತ್ತಾಯ ಮಾಡುತ್ತಾ ಇದ್ದಾರೆ. ರೈತನಿಗೆ ಅದನ್ನು ಕೊಡತಕ್ಕ ಶಕ್ತಿ ಇಲ್ಲದೇ ಇರುವಾಗ ಆತನ ಹಿತರಕ್ಷಣೆಯನ್ನು ಸರ್ಕಾರದವರು ಮಾಡಬೇಕು. ಅದನ್ನು ಬಿಟ್ಟು ಅವರ ಮೇಲೆ ಇಷ್ಟೊಂದು ಆಕ್ರೋಶವನ್ನು ತೋರಿಸುವುದು ಸೂಕ್ತವಲ್ಲ. ಇದರಿಂದ ವಿಪರೀತ ಕೆಟ್ಟ ಪರಿಣಾಮವಾಗಬಹುದು ಎಂದು ಈ ಸನ್ನಿವೇಶದಲ್ಲಿ ಹೇಳಬಯಸುತ್ತೇನೆ. ಕಂದಾಯವನ್ನು ಹೆಚ್ಚು ಮಾಡಿರುವುದರಿಂದ ಬಯಲು ಪ್ರದೇಶಕ್ಕಿಂತಲೂ ಮಲೆನಾಡಿಗೆ ಹೆಚ್ಚು ಧಕ್ಕೆಯಾಗಿದೆ. ಅನೇಕ ಕೆರೆಗಳಲ್ಲಿ ನೀರೇ ಇಲ್ಲ, ಇದನ್ನು ಸರ್ಕಾರಕ್ಕೆ ಮನವಿಗಳನ್ನು ಕೊಟ್ಟು ತಿಳಿಸಿದರೂ ಕೂಡ ಅಧಿಕಾರಿಗಳು ಇದನ್ನು ಗಮನಕ್ಕೆ ತೆಗೆದುಕೊಂಡಿಲ್ಲ, ಆದ್ದರಿಂದ ಇದನ್ನು ಈಗಲೂ ಕೂಡ ಪುನರ್ವಿಮರ್ಶೆ ಮಾಡಿ ಹಿಂದಿನ ಕಂದಾಯ ಏನಿತ್ತೋ ಅದನ್ನೇ ವಸೂಲು ಮಾಡಿದ್ದೇ ಆದರೆ ಸರ್ಕಾರಕ್ಕೆ ಹೆಚ್ಚು ಗೌರವ ಕೀರ್ತಿ ದೊರೆಯುತ್ತದೆ ಎಂದು ಹೇಳುತ್ತೇನೆ. ಹಾಗೇ ಮಾಡದೇಹೋದಲ್ಲಿ ಮುಂದಿನ ಕೆಲಸ ಎಂದರೆ ಇದರ ಬಗ್ಗೆ ಹೋರಾಟ ಮಾಡಿ ರಕ್ಷಣೆ ಪಡೆಯಬೇಕಾಗುತ್ತದೆ ಎಂದು ಹೇಳಿ

ಇದನ್ನು ಪುನರಾಲೋಚನೆ ಮಾಡಿ ಹಿಂದಿನ ಕಂದಾಯವನ್ನೆ ವಿಧಿಸಿದರೆ ರೈತರಿಗೂ ಸಹಾಯವಾಗುತ್ತದೆ ಮತ್ತು ನಿಮಗೂ ಕೂಡ ಒಳ್ಳೆಯ ಹೆಸರು ಬರುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜಿ. ದುಗ್ಗಪ್ಪ (ಭರಮ ಸಾಗರ):—

ಸ್ವಾಮಿ, ರೈತರು ಯಾವ ಫಸಲನ್ನು ಇಡುತ್ತಾರೆಯೋ ಅವರ ಮೇಲೆ ನೀರು ಕಂದಾಯವನ್ನು ವಸೂಲು ಮಾಡಬೇಕೆಂದು ಈ ಬಗ್ಗೆ ಒಂದು ಕಾನೂನನ್ನು ತಂದು ಈಗ ಈ ಪದ್ಧತಿಯಮೇಲೆ ಕಂದಾಯ ವನ್ನು ಮಾಡುತ್ತಾ ಇದ್ದಾರೆ. ಇದರಿಂದ ರೈತರಿಗೆ ಏನು ತೊಂದರೆಯಾಗಿದೆ ಎನ್ನುವುದನ್ನು ಅಧಿಕಾರ ದಲ್ಲಿರತಕ್ಕ ಯಾವ ಮಾನ್ಯ ಸದಸ್ಯರೂ ಯೋಚನೆ ಮಾಡಿದ ಹಾಗೆ ಕಾಣಲಿಲ್ಲ. ಇದು ಬಹಳ ಮುಖ್ಯವಾದ ವಿಚಾರ. ಹಳೇ ಮೈಸೂರು ಭಾಗದಲ್ಲಿ ನೂರಾರು ವರ್ಷಗಳ ಹಿಂದೆ ಕೆರೆಗಳನ್ನು ಕಟ್ಟಿ ಅವರ ಕೆಳಗೆ ಇರತಕ್ಕ ಅಚ್ಚುಕಟ್ಟುದಾರು ಸಾರೋದ್ಧಾರವಾಗಿ ತರೀ ಕಂದಾಯವನ್ನು ಕೊಟ್ಟುಕೊಂಡು ಬರತಕ್ಕ ಪದ್ಧತಿ ಇತ್ತು. ಈ ಹೊಸ ಪದ್ಧತಿ ಪ್ರಕಾರ ಬೆಳೆಗೆ ಅನುಗುಣವಾಗಿ ನೀರು ಕಂದಾಯವನ್ನು ವಸೂಲು ಮಾಡುತ್ತಾ ಇದ್ದೀರಿ. ಇದು ಸಾಧುವಾದುದಲ್ಲ. ಈ ಒಂದು ಅಂಶವನ್ನು ಸರ್ಕಾರದವರು ತೀವ್ರವಾಗಿ ಪರಿಗಣನೆ ಮಾಡಬೇಕು. ಸಣ್ಣಪುಟ್ಟ ಕೆರೆಗಳಿಂದ ಹಿಡಿದು ದೊಡ್ಡ ದೊಡ್ಡ ಪ್ರಾಜೆಕ್ಟ್ ಏರಿಯಾದಲ್ಲಿರತಕ್ಕ ಪ್ರದೇಶದಲ್ಲಿ ಎಲ್ಲಾಕಡೆಯೂ ಈಗಿನ ಕಾನೂನು ಪ್ರಕಾರ ವಾಟರ್ ರೇಟ್ ವಸೂಲು ಮಾಡುತ್ತಾ ಇದ್ದೀರಿ. ನೀರು ಎಷ್ಟು ಉಪಯೋಗಿಸಲ್ಪಡುತ್ತದೆಯೋ ಅದಕ್ಕೆ ತಕ್ಕಂತೆ ನೀರು ಕಂದಾಯವನ್ನು ಕೊಡಬೇಕು, ಉದಾಹರಣೆಗೆ ಕಡಲೇಕಾಯಿ, ರಾಗಿ ಇದಕ್ಕೆ ಒಂದು ರೇಟು ಇದೆ, ಬತ್ತವಗೈರೆಗೆ ಒಂದುರೇಟು ಇದೆ, ಕಬ್ಬು ವಗೈರೆಗೆ ಒಂದು ರೇಟು. ಕಬ್ಬು ವರ್ಷದಲ್ಲಿ ಎರಡು ಫಸಲು ಬಿಟ್ಟರೆ, ಎರಡು ಸಾರಿ ಕಂದಾಯ ವಸೂಲು ಮಾಡ ಬೇಕೆಂದು ಇದೆ. ಈಗ ಬಂದಿರುವ ತೊಂದರೆ ಏನೆಂದರೆ ಕೆರೆಗೆ ನೀರು ಬಂದರೆ ಅದು ಎಷ್ಟು ಎಕರೆಗೆ ಸಾಕಾಗುತ್ತದೆ? ಬತ್ತದಬೆಳೆ ಇಟ್ಟರೆ, ಟೇಲ್ ಎಂಡ್‌ನಲ್ಲಿರತಕ್ಕ ಭೂಮಿಗೆ ನೀರು ಸಾಕಾಗುತ್ತದೆಯೋ ಇಲ್ಲವೋ ? ಶ್ಯಾನುಭೋಗರು ಬರೆಯುತ್ತಾರೆ ಅಂತ ಹೇಳಿ ಕಂದಾಯ ಹಾಕಿಬಿಟ್ಟರೆ ಅವರ ಗತಿ ಏನು ? ಕೆಲವು ಸಲ ಅವರು ಇಟ್ಟಿರತಕ್ಕ ಫಸಲು ಕೆಟ್ಟು ಹೋಗುತ್ತದೆ. ಸಾಕಷ್ಟು ನೀರು ಸಿಕ್ಕದೆ ಕೆಲವುಕಡೆ ರೈತರಿಗೆ ಬಹಳ ಲುಕ್ಸಾನಾಗಿದೆ. ಅಧಿಕಾರಿಗಳು ಬತ್ತದ ಬೆಳೆ ಇಟ್ಟಿದ್ದಾರೆ ಬತ್ತದ ಕಂದಾಯ ಕೊಡಬೇಕೆಂದು ಹೇಳುತ್ತಾರೆ. ಆದ್ದರಿಂದ ವಾಟರ್ ರೇಟ್ ಲೆವಿ ಮಾಡುವುದಕ್ಕೆ ಮೊದಲು ಕೆರೆ ಅಂಗಳದಲ್ಲಿ ಕರಾರು ವಾಕ್ಕಾಗಿ ಎಷ್ಟು ನೀರನ್ನು ಕೊಡುವುದಕ್ಕೆ ಅನುಕೂಲ ಮಾಡಿದ್ದೀರಿ ಎಂಬುದನ್ನು ನಿಗದಿ ಮಾಡಬೇಕು. ಭದ್ರಾ ಚಾನಲ್ ವಿಷಯ ಹೇಳುವುದಾದರೆ ಎರಡು ಮೂರು ಕಡೆ ಚಾನಲ್ ಒಡೆದು ಹೋಗಿದೆ ಅದರಿಂದ ದಾವಣಗೆರೆ ತಾಲ್ಲೂಕು ಕುಂದಗೋಳ, ತನಿಗೆರೆ ರೈತರ ಪರಿಸ್ಥಿತಿ ನೋಡಿದರೆ ಕಣ್ಣಿನಲ್ಲಿ ನೀರು ಬರುತ್ತದೆ. ಅವರು ಇಟ್ಟ ಬತ್ತದ ಬೆಳೆ ಇವತ್ತು ಒಣಗಿ ಹೋಗಿದೆ. ಹೀಗಾದರೆ ಅವರು ಹೇಗೆ ಉದ್ಧಾರವಾಗಬೇಕು ಎಂಬುದನ್ನು ತಾವು ಯೋಚನೆ ಮಾಡಬೇಕು. ರೈತರ ಕಷ್ಟ ಸುಖ ಏನೆಂಬುದನ್ನು ತಾವು ತಿಳಿದುಕೊಳ್ಳ ಬೇಕು. ತಮಗೆ ಎಷ್ಟು ಹಣಬೇಕೋ ಅದನ್ನು ಕೊಡುವುದಕ್ಕೆ ಅವರು ತಯಾರಾಗಿದ್ದಾರೆ, ತಾವು ವಸೂಲು ಮಾಡುತ್ತೀರಿ, ಆದರೆ ಅವರಿಗೆ ಬೇಕಾದ ಅನುಕೂಲ ಮಾಡಿಕೊಡಿ.

[*Mr Deputy speaker in the Chair*]

ಅಧಿಕಾರಿಗಳು ಹೇಳುವರೆಂದು ನೀವು ಮಾಡುತ್ತಿದ್ದೀರಿ, ಇದು ಸರಿಯಲ್ಲ. ಶ್ರೀಮಾನ್ ಶ್ರೀನಿವಾ ಸರವರು ಹೇಳಿದಂತೆ ಇರಿಗೇಷನ್ ಆಕ್ಟನ್ನು ಸೂಕ್ತ ರೀತಿಯಲ್ಲಿ ತಿದ್ದುಪಾಟು ಮಾಡಬೇಕು. ಆಕ್ಟ್ ರೂಲ್ಸ್ ಮಾಡಿರುವುದರಲ್ಲೂ ಕೂಡ ಸರಿಯಾದ ರೀತಿಯಲ್ಲಿ ಬದಲಾವಣೆ ಮಾಡಬೇಕು ಎಂದು ಹೇಳುತ್ತೇನೆ.

5 P. M.

ಶ್ರೀ ಕೆ. ಪ್ರಭಾಕರ್ (ವರ್ತೂರು) :—ಮಾನ್ಯ ಅಧ್ಯಕ್ಷರೇ ಭೂಕಂದಾಯದ ವಿಚಾರದಲ್ಲಿ ಮಾನ್ಯ ಸದಸ್ಯರು ಸರಕಾರದ ಮುಂದೆ ಅನೇಕ ರೀತಿ ನಿವೇದನೆ ಮಾಡುತ್ತಿದ್ದಾರೆ. ಕಂದಾಯ ಏರಿಕೆ ನೋಡಿದರೆ ಒಂದು ರೀತಿಯಲ್ಲಿ ಅನಾದರಣೀಯ ಭಾವನೆ ಕಂಡುಬರುತ್ತಿದೆ. ಅಸಲು ಕಂದಾಯ, ಲೈಬ್ರೆರಿ ಸೆಸ್, ಸರ್‌ಚಾರ್ಜ್, ಅದರ ಮೇಲೆ ಬಡ್ಡಿ, ನೀರು ಸರದಿ ಎಲ್ಲಾ ಸೇರಿಸಿ ವಸೂಲು ಮಾಡುತ್ತಿರುವುದು ತೊಡಕಾಗಿದೆ, ಜನತೆಗೆ ಭಾರವಾಗಿದೆ. ನೀರು ಕೊಡದಿರುವ ಜಮೀನಿಗೆ ನೀರು ಸರದಿ ಹಾಕುವರು. ಇದನ್ನು ಹೇಳಿದರೆ ಕಾನೂನು ತಿದ್ದುಪಡಿಮಾಡಿ ರೈತರಿಗೆ ಉಪಕಾರ ಮಾಡುತ್ತೇವೆಂದು ಸರ್ಕಾರ ಹೇಳುವುದು ನಂತರ ಸಾಕಷ್ಟು ಗಮನ ಕೊಡದಿರುವುದು ಸರಿಯಲ್ಲ. ಐದಾರು ವರ್ಷದಷ್ಟು ಬಾಕಿ ಇರು

(ಶ್ರೀ ಕೆ. ಪ್ರಭಾಕರ್)

ವುದರಿಂದ ಯಾವ ಸಾಲಿನ ಕಂದಾಯವೆಷ್ಟು ಬಾಕಿಯಿದೆ ಎಂಬುದು ಗೊತ್ತಾಗುವುದಿಲ್ಲ. ಇದರಿಂದ ರೈತರು ಕಷ್ಟಕ್ಕೆ ಸಿಕ್ಕಿದ್ದಾರೆ. ನೋಟೀಸು ಕೊಡುವಾಗ ಸಾಲುವಾರು ಇಂಥ ಬಾಬುಗಳಿಗೆ ಇಷ್ಟು ಕೊಡಬೇಕೆಂದು ತಿಳಿಸಿ ನಂತರ ವಸೂಲುಮಾಡುವುದಾಗಿ ಮಂತ್ರಿಗಳು ಹೇಳಿದ್ದರು. ಈಗ ಹಾಗೆ ಮಾಡಿಲ್ಲ, ಶ್ಯಾನುಭೋಗರನ್ನು ಕೇಳಿ ವಸೂಲುಮಾಡುತ್ತಿದ್ದಾರೆ. ಟಿ. ಟಿ. ಫೈನು, ಬಗರ್‌ಹುಕುಂ ಸಾಗುವಳಿ ಮಾಡಿರುವುದಕ್ಕೆ ದಂಡ ಮುಂತಾದ್ದನ್ನು ಹಾಕುತ್ತಿದ್ದಾರೆ. ಸರಕಾರಕ್ಕೆ ಬರುವ ಕಂದಾಯ ಲೀಕೇಜ್ ಆಗುವ ಅಪಾಯವಿದೆ. ಹೊಸ ನಮೂನೆ ಪಟ್ಟೆ ಕೊಟ್ಟು ರೈತರಿಗೆ ತೊಡಕಿಲ್ಲದಂತೆ ಮಾಡುವುದಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಆದರೆ ಅದರಂತೆ ಆಗಿಲ್ಲ, ರೈತರಿಗೆ ಉಪಕಾರವಾಗಿಲ್ಲ. ಇದರಿಂದ ರೈತರಿಗೆ ಜುಗುಪ್ಸೆಯಾಗಿದೆ. ಆದುದರಿಂದ ರೈತರಿಗೆ ಇಷ್ಟು ಕಂದಾಯ ಕೊಡಬೇಕೆಂಬುದು ನಿಗದಿಯಾಗಿ ಗೊತ್ತಾಗುವ ಹಾಗೆ ಮಾಡಿ ಅಧಿಕಾರಿಗಳ ಮೂಲಕ ಕಂದಾಯ ವಸೂಲುಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಅನಾವಶ್ಯಕವಾಗಿ ರೈತರಲ್ಲಿ ಕ್ರಾಂತಿಕಾರಕ ಮನೋಭಾವನೆ ಮೂಡಲು ಅವಕಾಶವಾಗಬಹುದು. ಆದುದರಿಂದ ರೈತರಿಗೆ ಖಚಿತವಾಗಿ ಗೊತ್ತಾಗುವ ಹಾಗೆ ಕಂದಾಯ ವಸೂಲು ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಬೇಡಿಕೊಳ್ಳುತ್ತೇನೆ. ಮತ್ತು ನೀರು ಒದಗಿಸದೆ ನೀರು ಸರದಿ ಕಂದಾಯವನ್ನು ವಸೂಲು ಮಾಡಬಾರದು, ಈಗ ರೈತರಿಗೆ ಆಗಿರುವ ತೊಂದರೆಯನ್ನು ತಪ್ಪಿಸಬೇಕು ಎಂದು ಪ್ರಾರ್ಥಿಸುತ್ತೇನೆ.

SRI K. H. SRINIVAS :—Sir, the varius matters raised in connection with the adjournment motion are quite differnt from the points that I have raised under rule 312. The points raised by them relate to collection of land revenue. But my point relates only to the legal position emerging out of the fact that Government have orderd a fresh revision in the zones that I have referred to. In view of the simple nature of the point that I have raised and in view of the fact that my notice is an earlier one dated 24th, I request the points raised by me may be clarified first.

ಶ್ರೀಮತಿ ಲೀಲಾವತಿರೈ:—(ಬಂಟ್‌ವಾಳ್) ದಕ್ಷಿಣ ಕನ್ನಡ ಜಿಲ್ಲೆಯ ವಿಚಾರ ಸ್ವಲ್ಪ ಹೇಳಬೇಕಾಗಿದೆ. ಆ ಜಿಲ್ಲೆ ಮುಂದುವರೆದಿದೆಯೆಂದು ಹೇಳಿದರೂ ಅಲ್ಲಿ ನೀರಿನ ಅನುಕೂಲವಿಲ್ಲ, ಆದರೆ ವಾಟರ್ ರೇಟ್ ವಿಧಿಸುತ್ತಿದ್ದಾರೆ. ನದಿಯಿಂದ ಅಲ್ಲಿ ನೀರನ್ನು ಎತ್ತಿ ವ್ಯವಸಾಯ ಮಾಡುವರು. ಅಲ್ಲಿ ಪಂಪ್‌ಸೆಟ್ಟನ್ನು ಉಪಯೋಗಿಸಿದರೂ ರೈತರು ಕಷ್ಟಪಟ್ಟರೂ ಎರಡನೆ ಬೆಳೆಗೆ ನೀರು ಸಾಲದೆ ಅರ್ಧ ಬೆಳೆ ಹಾಳಾಗುವುದು. ಮೂರನೆಯ ಬೆಳೆಗೆ ನೀರಿರುವುದಿಲ್ಲ. ಹಾಗಿರುವಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಟರ್ ರೇಟ್ ವಸೂಲು ಮಾಡಲು ಆರ್ಡರು ಮಾಡಿರುವುದನ್ನು ಸಡಿಲಿಸಿ ನೀರಿದೆಯೇ, ಇಲ್ಲವೇ ಎಂದು ನೋಡಿ ಎಲ್ಲಿ ನೀರಿದೆ, ಎಲ್ಲಿ ಇರಿಗೇಷನ್ ಇದೆ ಅಲ್ಲಿ ಮಾತ್ರ ವಾಟರ್ ರೇಟ್ ತೆಗೆದುಕೊಳ್ಳಬೇಕು. ನೀರಿಲ್ಲದಿರುವ ಕಡೆ ರೈತರ ಕಷ್ಟ ನೋಡಿ ದರ ನಿಗದಿಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಶ್ರೀ ಎಸ್. ಎಚ್. ಬಸಣ್ಣ :—(ಮೊಳಕಾಲ್ಮೂರು) ಕೆಲವು ಕಡೆ ಎಕರೆಗೆ ಒಬ್ಬರಂತೆ ಆಳನ್ನು ಕಳಿಸಿ ಹಳ್ಳ ತೆಗೆಸಿ ನೀರನ್ನು ಉಪಯೋಗಿಸಿಕೊಳ್ಳುವರು, ಅಂಥ ಕಡೆ ವಾಟರ್ ರೇಟನು ಹಾಕುವುದು ಬಹಳ ಅನ್ಯಾಯ. ಚಳ್ಳಕೆರೆ, ಮೊಳಕಾಲ್ಮೂರು ಮುಂತಾದ ತಾಲ್ಲೂಕುಗಳಲ್ಲಿ ಬೆಳಿಗ್ಗೆ ೪ ಗಂಟೆಗೆ ಆಳು ಹೋಗಿ ಸಾಯಂಕಾಲ ೪ ಗಂಟೆಯವರೆಗೆ ಮರಳು ಬಗೆದು ನೀರನ್ನು ತೆಗೆದುಕೊಳ್ಳುವುದಕ್ಕೂ ವಾಟರ್ ರೇಟ್ ಹಾಕಿದ್ದಾರೆ. ರಾಯಲ್ಟಿ ವಿಚಾರ ಚೀಫ್ ಎಂಜಿನಿಯರು ಹೇಳಿರುವುದು ರೈತರಿಗೆ ಗೊತ್ತಾಗಿಲ್ಲ, ತಹಸಿಲ್ದಾರರು ಮನೆಗಳಿಗೆ ಬಂದು ಕಂದಾಯ ವಸೂಲುಮಾಡುವುದು ಅನ್ಯಾಯ. ಇದನ್ನು ವಿಚಾರಮಾಡಿ ತಕ್ಕ ವ್ಯವಸ್ಥೆ ಮಾಡಬೇಕು.

† ಶ್ರೀ ಬಿ. ಗಂಗಣ್ಣ :—(ಕಳ್ಳಂಬೆಳ್ಳ) ಅಧ್ಯಕ್ಷರೇ, ತುಮಕೂರು ಜಿಲ್ಲೆಯ ಪರವಾಗಿ ಕೆಲವು ವಿಷಯಗಳನ್ನು ಹೇಳುತ್ತೇನೆ. ಈಗ ರೀಕ್ಲಾಸಿಫಿಕೇಷನ್ ಪ್ರಕಾರ ಕಂದಾಯ ವಿಧಿಸಿರುವುದು ಹೆಚ್ಚು ಎಂಬುದಾಗಿ ಅನೇಕರು ಹೇಳುತ್ತಿದ್ದಾರೆ, ತುಮಕೂರು ಜಿಲ್ಲೆಯ ವಿಚಾರದಲ್ಲಿ ಕಂದಾಯ ಪುನರ್‌ವಿಮರ್ಶೆಯಾಗಬೇಕು. ಪ್ರತಿಯೊಬ್ಬರಿಗೂ ನೋಟೀಸು ಕೊಟ್ಟು ಅಬ್‌ಜೆಕ್ಷನ್ ಕಾಲ್‌ಫಾರ್ ಮಾಡಿ ತೀರ್ಮಾನಮಾಡಬೇಕು. ಹಾಗೆ

ಮಾಡದೆ ಕಂದಾಯ ವಸೂಲು ಮಾಡುತ್ತಿದ್ದಾರೆ. ಜೊತೆಗೆ ಮೂರು ನಾಲ್ಕು ವರ್ಷ ಬೆಳೆಯಿಲ್ಲದೆ ಕಂದಾಯ ಮಾಫಿ ಮಾಡಬೇಕೆಂದು ಶಿಫಾರಸು ಮಾಡಿದ್ದರೂ ಮಾಫಿ ಮಾಡಿಲ್ಲ. ಇದರಿಂದ ಜನರಿಗೆ ಸಂಶಯ ಬಂದಿದೆ. ಏಕೆ ನಿಧಾನಮಾಡುತ್ತಿದ್ದಾರೆಂದು ಅರ್ಥವಾಗುವುದಿಲ್ಲ. ವಾಟರ್ ರೇಟ್ ವಿಧಿಸಿರುವುದು ಕೆಲವು ಸಂದರ್ಭಗಳಲ್ಲಿ ನ್ಯಾಯವಾಗಿದ್ದರೂ ರೈತರಿಗೆ ತೊಂದರೆಯಾಗಿರುವ ಸಂದರ್ಭಗಳಲ್ಲಿ ವಿಚಾರಿಸಿ ಯಾವಯಾವ ಪ್ರದೇಶದಲ್ಲಿ ಯಾವಯಾವ ವರ್ಷ ಬೆಳೆಯಾಗಿದೆ ಎಂದು ನೋಡಿ ವಸೂಲು ಮಾಡುವುದು ನ್ಯಾಯ. ಆದುದರಿಂದ ವಾಟರ್ ರೇಟಿನ ವಿಚಾರದಲ್ಲಿ ದೀರ್ಘವಾಗಿ ಪರಿಶೀಲಿಸಬೇಕಾಗಿದೆ. ಜಿಲ್ಲಾಧಿಕಾರಿಗಳಿಗೆ ಕೊಟ್ಟಿರುವ ಆದೇಶವನ್ನು ಪರಿಪಾಲನೆ ಮಾಡುತ್ತಿಲ್ಲವೆಂದು ರೈತರಿಗೆ ಅಸಮಾಧಾನವಾಗಿದೆ. ಇದೆಲ್ಲವನ್ನೂ ತೀವ್ರವಾಗಿ ಗಮನಿಸಿ ಜಾಗ್ರತೆ ನಮ್ಮ ಜಿಲ್ಲೆಯ ವಿಷಯವನ್ನೂ ಇತರ ಜಿಲ್ಲೆಗಳಲ್ಲಿ ತೀರ್ಮಾನ ಮಾಡಿರುವಂತೆ ತೀರ್ಮಾನಿಸಿ ಸೂಕ್ತ ಕ್ರಮ ಕೈಗೊಂಡು ರೈತರಿಗೆ ಪರಿಹಾರ ಒದಗಿಸಬೇಕು.

†Sri B. B. SAYANAK (Belgaum);—Sir, regarding water rate, on our side there are so many tanks. In every village their is a tank but these tanks are not repaired and desilted. After the merger of Belgaum in the Mysore State, in Belgaum Taluk not a single tank has been desilted or repaired by the Government. So, I request the Government not to harass the agriculturists and not to levy water rate from the agriculturists.

†ಶ್ರೀ ಎಂ.ಎಂ. ಜಾಲಿಸಟ್ಗಿ:—ಉತ್ತರ ಕನ್ನಡ ಜಿಲ್ಲೆಯಲ್ಲಿ, ತೆರಿಗೆಯಲ್ಲಿ ವಾಟರ್ ರೇಟ್ಸ್ ಸಹ ಸೇರಿದೆ. ೫ ರೂಪಾಯಿನಿಂದ ೧೮ ರೂಪಾಯಿವರೆಗೆ ಒಂದು ಎಕರೆಗೆ ತೆರಿಗೆ ಉಂಟು. ಹಿಂದಿನ ರಿವಿಷನ್ಸ್ ನೋಡಿದರೆ ಇದು ಸ್ಪಷ್ಟವಾಗುತ್ತದೆ. ರೈತರು ಕೆಲವು ಕಡೆ ತಮ್ಮ ಖರ್ಚಿನಿಂದ ಕಟ್ಟೆಗಳನ್ನು ಕಟ್ಟಿ ನೀರನ್ನು ಉಪಯೋಗಿಸಿಕೊಳ್ಳುತ್ತ ಇದ್ದರೂ ಕಳೆದ ಐದು ವರ್ಷದಿಂದ ನೀರು ತೆರಿಗೆ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಐದು ವರ್ಷದ ತೆರಿಗೆಯನ್ನು ಒಂದೇ ಸಲ ಕೊಡಬೇಕೆಂದು ಜಪ್ತಿ ಕ್ರಮ ನಡೆದಿದೆ. ಹೀಗೆ ಮಾಡಿದರೆ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ನಮ್ಮಲ್ಲಿ ಅವರ ಖರ್ಚಿನಿಂದ ಕಟ್ಟೆ ಕಟ್ಟಿಸಿಕೊಂಡು ನೀರು ಉಪಯೋಗ ಮಾಡುವವರಿಂದ ನೀರು ತೆರಿಗೆ ವಸೂಲ್ಮಾಡಬಾರದು ಮತ್ತು ಬಾಕಿ ಇರುವುದನ್ನು ಒಂದೇ ಸಲ ವಸೂಲು ಮಾಡಬಾರದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ.ಎಲ್. ಶಿವಪ್ಪ:—ತಿಪಟೂರು ತಾಲ್ಲೂಕಿನಲ್ಲಿ ಬಾಗಾಯತು ಜಮೀನಿಗೆ ಸೀಪೇಜ್ ವಾಟರ್ ಉಪಯೋಗಿಸಿಕೊಳ್ಳುತ್ತಿದ್ದರೂ ನೀರು ತೆರಿಗೆ ವಸೂಲು ಮಾಡುತ್ತಿದ್ದಾರೆ. ತೋಟದ ಜಮೀನಿಗೆ ಈಗಾಗಲೇ ಬಾಗಾಯತು ದರವನ್ನು ನಿಗದಿ ಮಾಡಿದ್ದರೂ ವಾಟರ್ ರೇಟ್ ಸಹ ಹಾಕುತ್ತಿದ್ದಾರೆ. ೧೯೬೫ರಲ್ಲಿ ರೀ ಕ್ಲಾಸಿಫಿಕೇಷನ್ ಆಗಿದೆ. ಕಂದಾಯ ೫ ರೂಪಾಯಿನಿಂದ ೨೫ ರೂಪಾಯಿಗೆ ಜಾಸ್ತಿಯಾಗಿದೆ. ಮಳೆ ಬೆಳೆ ಇಲ್ಲ ಎಂದು ಹೇಳುವಾಗ, ಜಾಸ್ತಿ ಮಾಡಿರುವ ದರದ ಪ್ರಕಾರ ಬಹಳ ತುರ್ತಾಗಿ ವಸೂಲು ಮಾಡುತ್ತಿದ್ದಾರೆ. ಕಾನೂನು ಪ್ರಕಾರ ಅರ್ಜಿ ಕೊಟ್ಟಿದ್ದು, ಆದರ ಬಗ್ಗೆ ತೀರ್ಮಾನವಾಗುವವರೆಗೂ ಕಂದಾಯವನ್ನು ವಸೂಲು ಮಾಡಬಾರದು ಎಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ವೀರಪ್ಪಗೌಡ:—ನಾನು ಅನೇಕ ಬಾರಿ ರೆವೆನ್ಯೂ ಸೆಕ್ರೆಟರಿಗಳ ಹತ್ತಿರ ಹೋಗಿದ್ದೇನೆ. ಹಿಂದೆ ಬಾಗಾಯತು ಮತ್ತು ತರೀ ಕಂದಾಯ ಏನಿತ್ತು ಅದರಲ್ಲಿ ವಾಟರ್ ಸೆಸ್ ಸಹ ಸೇರಿದೆ. ಈಗ ಆ ರೀತಿ ಕೊಡಬೇಕಾದ್ದಿಲ್ಲ. ಆ ರೀತಿ ವಸೂಲು ಮಾಡಿದ್ದರೆ ಅದು ಸರಿಯಲ್ಲ ಮತ್ತು ವಾಟರ್ ರೇಟ್ ಕೊಡುವುದಾದರೆ ಖುಷ್ಕಿ ಕಂದಾಯ ಮಾತ್ರ ಕೊಡಬೇಕಾಗುತ್ತದೆ ಎಂದು ನನಗೆ ಹೇಳಿದ್ದಾರೆ. ಆ ರೀತಿ ಸೂಚನೆಯನ್ನೂ ಅಧಿಕಾರಿಗಳಿಗೆ ಕೊಡಲಾಗಿದೆ ಎಂದು ಹೇಳಿದ್ದಾರೆ. ಆದರೆ ಸ್ಥಳೀಯ ಅಧಿಕಾರಿಗಳು ಪೆಚ್ಚು ವರಿ ಕಂದಾಯದಂತೆ ಐದು ವರ್ಷದ ಡಿಮಾಂಡ್ ಹಾಕಿ, ನೂರು ರೂಪಾಯಿ ಕಂದಾಯ ಕೊಡುವವರಿಗೆ ಒಂದು ಸಾವಿರ, ಒಂದೂವರೆ ಸಾವಿರ ರೂಪಾಯಿ ವಾಟರ್ ರೇಟ್ ಕೊಡಬೇಕೆಂದು ನೋಟೀಸ್ ಕೊಡುತ್ತಿದ್ದಾರೆ. ನಾವು ಏನಾದರೂ ಕೇಳಿದರೆ ಅಪೀಲು ಹೋಗುವುದಕ್ಕೆ ಅವಕಾಶವಿದೆ, ಅಪೀಲು ಹೋಗಿ ಎಂದು ಹೇಳುತ್ತಾರೆ. ಅಸಿಸ್ಟೆಂಟ್ ಕಮೀಷನರ್ ಕೋರ್ಟ್ ಇರುವುದು ತರೀಕೆರೆಯಲ್ಲಿ; ೭೦ ಮೈಲಿ ದೂರವಾಗುತ್ತದೆ. ರೈತರಿಗೆ ಅಲ್ಲಿಗೆ ಹೋಗಲು ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈ ಬಗ್ಗೆ ವಿಮರ್ಶೆ ಮಾಡಿ ಸೂಕ್ತ ತಿಳುವಳಿಕೆಯನ್ನು ನೀಡುವಂತಹ ಸರ್ಕ್ಯುಲರ್‌ಗಳನ್ನು ತಕ್ಷಣ ಎಲ್ಲ ಕಡೆಗೂ ಹೊರಡಿಸಬೇಕು.

ಶ್ರೀ ಚಿಕ್ಕೇಗೌಡ:—ಮೂರು ವರ್ಷದಿಂದ ಅರಿಕೆ ಮಾಡಿಕೊಳ್ಳುತ್ತಿದ್ದರೂ ರಿಯಾಯಿತಿಗಳನ್ನು ಸರ್ಕಾರ ಕೊಟ್ಟಿಲ್ಲ. ಕುಡಿಯುವುದಕ್ಕೆ ನೀರಿಲ್ಲ, ತೋಟಗಳು ಉಳಿಯುವ ಹಾಗೆ ಇಲ್ಲ. ಐದು ವರ್ಷದ ಕಂದಾಯ ಒಂದೇ ಸಲ ಕೊಡಬೇಕೆಂದು ಹೇಳುತ್ತಾರೆ. ಮಳೆಬೆಳೆ ಇಲ್ಲದೆ ರೈತರಿಗೆ ಬಹಳ ಕಷ್ಟವಾಗಿದೆ. ಎಲ್ಲರೂ ಹೇಳಿದ ಹಾಗೆ ವಾಟರ್ ರೇಟ್ ಬಗ್ಗೆ ವಿಮರ್ಶೆ ಮಾಡಬೇಕು.

ಶ್ರೀ ಎಲ್. ಶ್ರೀಕಂಠಯ್ಯ:—ಮೈಸೂರು ಜಿಲ್ಲೆ ವಿಷಯವಾಗಿ ಒಂದು ವಿಚಾರ ಅರಿಕೆ ಮಾಡಬೇಕಾಗಿದೆ. ಕಂದಾಯ ಹಾಕಬಾರದು ಎಂದು ಯಾವತ್ತೂ ಹೇಳಿಲ್ಲ. ಆದರೆ ಮಾನ್ಯ ಶಿವಪ್ಪನವರು ಒಂದು ವಿಷಯವನ್ನು ತಮ್ಮ ಗಮನಕ್ಕೆ ತಂದರು. ಕಂದಾಯ ರದ್ದು ಮಾಡುತ್ತೇವೆಂದು ಸರ್ಕಾರದವರು ಹಿಂದೆ ಹೇಳಿದ್ದರು. ರೈತರು ಇದರ ಬಗ್ಗೆ ಆಸೆಯನ್ನು ಇಟ್ಟುಕೊಂಡಿದ್ದರು. ಇಂಥ ಒಂದು ಆಸೆಯನ್ನು ಚುನಾವಣೆಗಳ ಸಮಯದಲ್ಲಿ ತೋರಿಸಬೇಕಾದಾಗಿತ್ತು. ಸರ್ಕಾರದವರೇ ಅದಕ್ಕೆ ನಾಂದಿ ಹಾಕಿ ಕೊಟ್ಟರು. ಇದಾದಮೇಲೆ, ೧೯೬೪ನೇ ಇಸವಿಯಲ್ಲಿ ಲ್ಯಾಂಡ್ ರೆವಿನ್ಯೂ ಆಕ್ಟ್ ಬಂದಮೇಲೆ ವರ್ಷಂಪ್ರತಿ ಇರತಕ್ಕ ಕಂದಾಯವನ್ನು ಏಕೆ ವಸೂಲು ಮಾಡಲಿಲ್ಲ? ಇದಕ್ಕೆ ಯಾವ ವಿಧವಾದ ಸಮಂಜಸವಾದ ಉತ್ತರವನ್ನೂ ಕೊಟ್ಟಿಲ್ಲ. ಶ್ಯಾನುಭೋಗರ ಪಟೇಲರ ಬದಲಾವಣೆ ಏನೇನೋ ಆಗುತ್ತಿದ್ದು ಕಂದಾಯವನ್ನು ವಸೂಲು ಮಾಡಲಿಲ್ಲ. ಆ ಕಾರಣದಿಂದ ಈಗ ಹಠಾತ್ತಾಗಿ ನಾಲ್ಕೈದು ವರ್ಷದ ಕಂದಾಯವನ್ನು ಒಟ್ಟಿಗೆ ಕೊಡಿ ಎಂದರೆ ರೈತನಿಗೆ ಕೊಡುವುದಕ್ಕೆ ಕಷ್ಟವಾಗುತ್ತದೆ. ಈ ವಿಷಯದಲ್ಲಿ ಮೈಸೂರು ಡೆಪ್ಯುಟಿ ಕಮಿಷನರು, ನಂಜನಗೂಡು ಮೈಸೂರು ತಹಶೀಲ್ದಾರರ ಜೊತೆಯಲ್ಲಿ ಮಾತನಾಡಿದ್ದೇನೆ. ನಾಲ್ಕುನೂರು ರೂಪಾಯಿ ಕೊಡಲು ಕಷ್ಟವಾಗುವುದಾದರೆ ಸ್ವಲ್ಪ ಸ್ವಲ್ಪವಾಗಿ ಕಾಲಕ್ರಮೇಣ ಕೊಡಲಿ ಎಂದು ಹೇಳಿದರು. ಇತ್ತೀಚೆಗೆ ಮಳೆಬೆಳೆಗಳು ಸರಿಯಾಗಿ ಆಗಿಲ್ಲ. ನಾಲ್ಕೈದು ಸಾವಿರ ರೂಪಾಯಿ ಒಟ್ಟಿಗೆ ರೈತನು ಕೊಡಬೇಕು ಎಂದರೆ ಬಹಳ ಕಷ್ಟವಾಗುತ್ತದೆ.

ನುಗು ಯೋಜನೆಯ ಬಯಲಿನಲ್ಲಿ ಒಂದು ವರ್ಷ ತರಿ ಬೆಳೆಗೆ ನೀರು ಕೊಡುತ್ತಾರೆ. ಮುಂದಿನ ವರ್ಷ ನೀರು ಕೊಡುವುದಿಲ್ಲ, ಬ್ಲಾಕ್ ಸಿಸ್ಟಂ ಮಾಡಿದ್ದಾರೆ. ಎಷ್ಟು ಬಗೆಯಿಂದ ಹೇಳಿದರೂ ಕೂಡ, ಒಂದು ವರ್ಷ ನೀರು ಕೊಡುತ್ತಾರೆ, ಇನ್ನೊಂದು ವರ್ಷ ನೀರು ಕೊಡುವುದಿಲ್ಲ, ಆದ್ದರಿಂದ ಒಂದು ವರ್ಷ ನೀರು ತೆರಿಗೆ ತೆಗೆದುಕೊಳ್ಳಿ, ಮುಂದಿನ ವರ್ಷ ನೀರು ತೆರಿಗೆ ತೆಗೆದುಕೊಳ್ಳಬೇಡಿ ಎಂದು ಎಷ್ಟು ಹೇಳಿದರೂ ಕೂಡ ಪ್ರತಿ ವರ್ಷವೂ ನೀರು ತೆರಿಗೆ ಹಾಕುತ್ತಿದ್ದಾರೆ. ತರೀ ಅಚ್ಚುಕಟ್ಟಿನಲ್ಲಿದೆ ಎಂದು ಅಸೆಸ್ ಆಗಿರುವುದರಿಂದ ಪೂರ್ತಿ ವಾಟರ್ ರೇಟ್ ಕೊಡಬೇಕು ಎಂದು ಕೇಳುವುದು ಅಧರ್ಮವಾಗಿ ಕಾಣುತ್ತದೆ. ಈ ವಿಷಯದಲ್ಲಿ ಹೆಚ್ಚು ಬಲಾತ್ಕಾರ ಮಾಡಿದರೆ, ಗ್ರಾಮಾಂತರದಲ್ಲಿ ಜನರು ಗಂಗೆ ಪಾಲಾಗಬೇಕಾಗುತ್ತದೆ.

ವಾಟರ್ ರೇಟ್ ಬೇರೆ, ಕಂದಾಯ ಬೇರೆ ಎನ್ನುವುದರ ಬದಲು ಮೊದಲು ಇದ್ದಹಾಗೆ ತೋಟದ ಕಂದಾಯ. ಗದ್ದೆ ಕಂದಾಯ, ಹೊಲದ ಕಂದಾಯ, ಈ ಮೂರರಲ್ಲಿ ಯಾವುದಾದರೂ ಒಂದು ಮಟ್ಟದ ಕಂದಾಯ ಚಾಲು ಮಾಡುವುದಾದರೆ ಬಹುಶಃ ಗ್ರಾಮಾಂತರದಲ್ಲಿ ಸ್ವಲ್ಪಮಟ್ಟಿಗೆ ಹಾಹಾಕಾರ ಕಡಿಮೆಯಾಗುತ್ತದೆ.

ಶ್ರೀ ಎಸ್. ಶಿವಪ್ಪ:—ಸ್ವಾಮಿ, ಇಷ್ಟು ಹೊತ್ತು ಎರಡೂ ಕಡೆಯವರ ಮಾತನ್ನು ಮಂತ್ರಿಗಳು ಕೇಳಿದ್ದಾರೆ. ಬಹುಶಃ ಅತ್ತಕಡೆಯ ಜನ, ಕಾಂಗ್ರೆಸ್ ಸ್ನೇಹಿತರು ಈ ಕಾನೂನು ಬಂದಾಗ ಇಷ್ಟೊಂದು ಕಂದಾಯ ಜಾಸ್ತಿ ಆಗುತ್ತದೆ ಎನ್ನುವ ಅರಿವು ಅವರಿಗೆ ಇರಲಿಲ್ಲ ಎಂದು ಕಾಣುತ್ತದೆ. ಆಗ ಮಾನ್ಯ ಕಂದಾಯ ಸಚಿವರಾಗಿದ್ದ ಕೃಷ್ಣಪ್ಪನವರಿಗೇ ಗೊತ್ತಿರಲಿಲ್ಲ. ಅವರೇ ಈ ಹೊತ್ತು ಕೂಗಾಡುತ್ತಿದ್ದಾರೆ. ಆದುದರಿಂದ ನೀರು ತೆರಿಗೆಯನ್ನು ಪುನರ್ವಿಮರ್ಶೆ ಮಾಡುವ ಕಾಲ ಬಂದೊದಗಿದೆ. ಎರಡೂ ಕಡೆಯ ಸದಸ್ಯರೂ ಹಳ್ಳಿಯ ರೈತರ ಗೋಳು ಏನಿದೆ ಎನ್ನುವುದನ್ನು ಖಚಿತವಾಗಿ ತಿಳಿದುಕೊಂಡಿದ್ದಾರೆ. ಯಾರೂ ಇಜ್ಜತ್ ಮೇಲೆ ನಿಂತುಕೊಳ್ಳಬೇಕಾಗಿಲ್ಲ. ಇರಿಗೇಷನ್ ಆಕ್ಟ್ ಮತ್ತು ರೀಸರ್ವೆ ಆಗಿರತಕ್ಕದ್ದು ಏನಿದೆ ಅದನ್ನೆಲ್ಲ ಪುನರ್ವಿಮರ್ಶೆ ಮಾಡಿ ಹಿಂದೆ ಏನು ಹಳೇ ತರಹ ಕಂದಾಯವಿತ್ತು, ಖುಷ್ಕಿ, ತರಿ, ಬಾಗಾಯತು, ಅದರಂತೆ ಅನ್ವಯ ಮಾಡಿದರೆ ರೈತನಿಗೆ ಅರ್ಥವಾಗುತ್ತದೆ, ಕಂದಾಯ ಪದ್ಧತಿಯನ್ನು ಸರಳವಾಗಿ ಮಾಡುವ ದೃಷ್ಟಿಯಿಂದ ವಾಟರ್ ರೇಟ್ ಆಕ್ಟ್ ರದ್ದು ಮಾಡಬೇಕು ಮತ್ತು ನಾಲ್ಕು ವರ್ಷದ್ದನ್ನು ಮತ್ತೆ ಕೇಳುವ ಹವ್ಯಾಸಕ್ಕೆ ಹೋಗದೆ ಅದನ್ನೆಲ್ಲ ಮನ್ನಾ ಮಾಡಿ. ೧೯೨೦-೨೧ರಿಂದ ಹಳೇ ಕಂದಾಯ ಪದ್ಧತಿಯನ್ನು ಜಾರಿಗೆ ತರಲು ಕಾನೂನಿಗೆ ಬೇಕಾದ ತಿದ್ದುಪಡಿಯನ್ನು ತೆಗೆದುಕೊಂಡು ಬನ್ನಿ. ನಾವು ಒಂದು ದಿವಸದಲ್ಲಿ ಹಳೇ ಪದ್ಧತಿಯನ್ನು ಅನುಸರಿಸಬೇಕೆಂಬ ತಿದ್ದುಪಡಿಯನ್ನು ಪಾಸು ಮಾಡಿ ಕೊಡುತ್ತೇವೆ.

ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ):—ಸ್ವಾಮಿ, ಅಧ್ಯಕ್ಷರೇ ನಾನು ನಿಜವಾಗಿಯೂ ಹಳ್ಳಿಯಲ್ಲಿ ವಾಸಮಾಡತಕ್ಕವನು. ಈ ದಿವಸ ನಮ್ಮ ಮಾನ್ಯ ರೆವಿನ್ಯೂ ಸಚಿವರಿಗೆ ಪಹಣೀ ಲೆಕ್ಕ ಅಂದರೇನು ಎಂಬುದು ಗೊತ್ತಿಲ್ಲ. ಹಾಗೇ ರೆವಿನ್ಯೂ ಇಲಾಖೆಯ ದೊಡ್ಡ ದೊಡ್ಡ ಅಧಿಕಾರಿಗಳಿಗೂ ಮತ್ತು ಪಟ್ಟಣಗಳಲ್ಲಿ ವಾಸಮಾಡತಕ್ಕ ಸದಸ್ಯರಿಗೂ ಪಹಣಿಯ ಲೆಕ್ಕವೆಂದರೇನು ಎಂಬುದು ಗೊತ್ತಿಲ್ಲ. ಇವರಿಗೆ ವಾಟರ್‌ರೇಟ್ ಎಂದರೇನು ಎಂಬುದು ಗೊತ್ತಿಲ್ಲ. ಅಂದಾಗ ಇವರಿಗೆ ಇಲ್ಲಿ ಸುಖೀರಾಜ್ಯವನ್ನು ಏರ್ಪಾಡುಮಾಡುತ್ತೇವೆಂದರೆ ಸಾಧ್ಯವಿದೆಯೇ? ಇವರು ಇಲ್ಲಿರಾಮರಾಜ್ಯವನ್ನು ಸ್ಥಾಪನೆ ಮಾಡುತ್ತೇವೆಂದು ರೈತರಮೇಲೆ ಒಂದಕ್ಕೆ ಹತ್ತರಷ್ಟು ತೆರಿಗೆಯನ್ನು ಏರಿಸಿ ಕಂದಾಯವನ್ನು ಮತ್ತು ವಾಟರ್ ರೇಟು ಅಥವ ಇತರೆ ತೆರಿಗೆಗಳನ್ನು ಇಷ್ಟು ಹೆಚ್ಚಿನ ಹೊರೆ ಹೇರಿದ್ದಾಗೂ ಸಹ ರಾಜ್ಯದಲ್ಲಿ ಇರತಕ್ಕ ಜನರಿಗೆ ಉದ್ಯೋಗ ಮತ್ತು ಅನ್ನ ಬಟ್ಟೆಗಳನ್ನು ಒದಗಿಸುವುದಕ್ಕಾಗುವುದಿಲ್ಲ ಎಂದರೆ ನಾಚಿಕೆಗೇಡಿನ ಬದುಕು. ಈ ದಿವಸ ರಾಜ್ಯದಲ್ಲಿರತಕ್ಕ ನೂರಾರು ಕೆರೆಗಳಲ್ಲಿ ಒಂದು ತಿಂಗಳ ನೀರು ಸಹ ನಿಲ್ಲುತ್ತಿಲ್ಲ. ಒಣಗಿದ ಕೆರೆಗಳೂ ಮತ್ತು ಒಡೆದುಹೋಗಿರತಕ್ಕ ಕೆರೆಗಳೂ ಅನೇಕ ಇವೆ. ಅಂಥ ಪ್ರದೇಶದಲ್ಲಿ ರೈತರಿಂದ ವಾಟರ್‌ರೇಟನ್ನು ವಸೂಲ್ಮಾಡುತ್ತಿದ್ದಾರೆ-ತರೀ ಕಂದಾಯವನ್ನು ವಸೂಲ್ಮಾಡುತ್ತಿದ್ದಾರೆ. ದೇಶದಲ್ಲೆಲ್ಲಾ ಹಸಿರು ಕ್ರಾಂತಿ ಉಂಟಾಗಿದೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ಬಣ್ಣ ಬಣ್ಣದ ಗ್ಲಾಸುಗಳಿಂದ ರಾಜ್ಯವನ್ನು ನೋಡುತ್ತಿದ್ದೀರಿ. ನಿಮ್ಮ ಕಣ್ಣು ಆಪರೇಷನ್ ಆಗಬೇಕು. ರಾಜ್ಯದ ಅನೇಕ ಭಾಗಗಳಲ್ಲಿ ಜನರಿಗೆ ಕುಡಿಯುವುದಕ್ಕೆ ನೀರೇ ಇಲ್ಲದಿರುವಾಗ ದೇಶದಲ್ಲಿ ಹಸಿರು ಕ್ರಾಂತಿ ಎಲ್ಲಿಂದ ಬರಬೇಕು? ಕಳೆದ ೪ ವರ್ಷಗಳಿಂದಲೂ ಮಳೆಬೆಳೆಗಳಾಗದೆ ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಸುಮಾರು ೨೨ ಸಾವಿರ ಎಕರೆ ಬಯಲಿನಲ್ಲಿ ಬೆಳೆಯಾಗಿಲ್ಲ. ರೈತರಿಗೆ ರಿಮಿಷನ್ ಕೂಡ ಕೊಟ್ಟಿಲ್ಲ. ಮಂಡ್ಯ ಜಿಲ್ಲೆಗೆ ಬರತಕ್ಕ ಮಂತ್ರಿಗಳು ಏನಿದ್ದರೂ ಅವರು ಬರತಕ್ಕ ಪ್ರೋಗ್ರಾಮನ್ನು ಅವರ ಕಾಂಗ್ರೆಸ್ ಏಜಂಟರಿಗೆ ತಿಳಿಸುತ್ತಾರೆ ಅವರೂ ಅವರ ಕಡೆಯ ಜನರೂ ಟಿ.ಬಿ ಯ ಬಳಿ ಕಾದಿದ್ದು ಇವರಿಗೆ ಅಲ್ಲಿ ಹಾರ ತುರಾಯಿಗಳನ್ನು ಅರ್ಪಿಸಿದ ಕೂಡಲೆ ಅವರ ಪಾರ್ಟಿ ವಿಚಾರಗಳನ್ನು ಮಾತನಾಡಿಕೊಂಡು ಮುಂದಕ್ಕೆ ಹೊರಟುಬಿಡುತ್ತಾರೆ ಹೀಗಾಗಿ ಅವರಿಗೆ ಗ್ರಾಮಗಳ ನಿಜಸ್ಥಿತಿ ಗೊತ್ತಿರುವುದಿಲ್ಲ ಈ ದಿವಸ ರಾಜ್ಯಸರ್ಕಾರದ ಬೊಕ್ಕಸಕ್ಕೆ ಬಂದು ಬೀಳತಕ್ಕ ಹಣದಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬರತಕ್ಕ ಹಣ ಅದರಲ್ಲಿ ಶೇ ೬೦ರಷ್ಟು ಇರುತ್ತದೆಂದು ಹಣಕಾಸಿನ ಸಚಿವರೇ ಹೇಳಿದ್ದಾರೆ. ಅಂಥ ಹಳ್ಳೀ ಜನರ ಪರಿಸ್ಥಿತಿ ಈ ದಿವಸ ಏನಾಗಿದೆ ಎಂಬುದನ್ನು ನೋಡಬೇಕಾಗಿದ್ದರೆ ಇವರು ನನ್ನ ಜೊತೆಯಲ್ಲಿ ಬರಲಿ ಇನ್ನು ೩-೪ ದಿನಗಳಲ್ಲಿ ವರ್ಷಕ್ಕೆ ಒಂದು ಆ ಉಗಾದಿ ಹಬ್ಬ ಬರುತ್ತದೆ, ಆ ದಿವಸ ಆ ಜನರ ಮನೆಯಲ್ಲಿ ಮಕ್ಕಳಿಗೆ ಆ ದಿವಸ ಅನ್ನವನ್ನು ಮಾಡಿಹಾಕುವುದಕ್ಕೂ ಕೂಡ ಒಂದು ಕೆ ಜಿ. ಅಕ್ಕಿ ಅವರ ಮನೆಯಲ್ಲಿರುವುದಿಲ್ಲ. ಅವರ ಪರಿಸ್ಥಿತಿ ಅಷ್ಟು ಚಿಂತಾಜನಕವಾಗಿರುತ್ತದೆ. ಆದರೆ ಅವರಲ್ಲಿ ಇನ್ನೂ ಒಗ್ಗಟ್ಟು ಒಂದು ಸಂಘಟನೆ ಎಂಬುದು ಒಂದಿಲ್ಲ. ಆ ಸಂಘಟನೆಯನ್ನು ಪಡೆದಿರತಕ್ಕ ನೌಕರರು ಈ ದಿವಸ ರಾಜ್ಯದಲ್ಲಿ ಎರಡೂಕಾಲು ಲಕ್ಷ ಜನರಿದ್ದಾರೆ ಆದ್ದರಿಂದಲೇ ಅವರು ಸರ್ಕಾರವನ್ನು ಹೆದರಿಸಿ ಮೊನ್ನೆ ೧೦ ಕೋಟಿ ರೂಪಾಯಿಗಳನ್ನು ಪಡೆದುಕೊಂಡರು. ಆಡಳಿತದಲ್ಲಿ ಅನುಭವವಿಲ್ಲದ ಸರ್ಕಾರ ಅವರ ಬೆದರಿಕೆಗೆ ಹೆದರಿ ೧೦ ಕೋಟಿ ರೂಪಾಯಿಗಳನ್ನು ಕೊಟ್ಟಿತು. ಇಲ್ಲಿಯವರೆಗಾದರೂ ಈ ಸರ್ಕಾರ ಗ್ರಾಮಾಂತರ ಪ್ರದೇಶದಲ್ಲಿ ಎಷ್ಟು ಜನರನ್ನು ಪದವೀಧರರನ್ನಾಗಿ ಮಾಡಿದೆ? ಈಗಲಾದರೂ ಸರಕಾರ ಗ್ರಾಮಾಂತರ ಜನತೆಯ ತಪ್ಪುಗಳನ್ನು ಖುದ್ದಾಗಿ ಪರಿಶೀಲನೆ ಮಾಡಿ ರೆವಿನ್ಯೂ ಕಂದಾಯವನ್ನು ತೆಗೆದುಹಾಕಿ ವಾಟರ್‌ರೇಟನ್ನು ದುಬಾರಿಯಾಗಿ ಹಾಕಬಾರದಾಗಿ ಮನವಿ ಮಾಡುತ್ತೇನೆ.

SRI M. RAMAPPA;—I would like to suggest one thing to the Government. We are having Consultative Committee in almost all the Departments. This is particularly a grave matter which concerns all the people in this House. I would suggest to the Hon. Revenue Minister not to simply give a reply just satisfy the Members. Let him constitute a Consultative Committee today and discuss these matters with all the members of that Consultative Committee to-morrow; and then give a considered reply.

ಶ್ರೀ ಎಚ್.ಡಿ. ದೇವೇಗೌಡ:—ಸ್ವಾಮಿ, ಶ್ರೀ ಕೆ. ಎಚ್. ಶ್ರೀನಿವಾಸನ್ ಅವರು ತಂದಿರತಕ್ಕ ಸೂಚನೆಯನ್ನು ಅಧ್ಯಕ್ಷರು ಚರ್ಚೆಮಾಡುವುದಕ್ಕೆ ಅನುಮತಿಯನ್ನು ನೀಡಿದ್ದಾರೋ ಇಲ್ಲವೋ ತಿಳಿಯದು. ಈ ವಾಟರ್ ರೇಟನ್ನು ಅಮೆಂಡ್ ಮಾಡಬೇಕೇ ಅಥವಾ ಅದನ್ನು ರದ್ದುಮಾಡಬೇಕೇ ಎಂಬುದು ಬೇರೆ ವಿಚಾರ. ಆದರೆ ಕಳೆದ ೪ ವರ್ಷಗಳಿಂದಲೂ ಹಾಸನ ಜಿಲ್ಲೆಯಲ್ಲಿ ಸರಿಯಾಗಿ ಮಳೆಬೆಳೆಯಾಗದೆ ಇದ

(ಶ್ರೀ ಹೆಚ್. ಡಿ. ದೇವೇಗೌಡ)

ಕಾರಣ ಮೊದಲು ಅಲ್ಲಿ ಕಂದಾಯವನ್ನು ಸಸ್‌ಪೆಂಡ್ ಮಾಡಿದರು. ಅನಂತರ ಅದರಲ್ಲಿ ಒಂದು ವರ್ಷದ ಕಂದಾಯವನ್ನು ರದ್ದು ಮಾಡಿದರು. ಈ ಪಹಣಿ ಲೆಕ್ಕಗಳನ್ನು ಬರೆಯುವುದರಲ್ಲಿ ಆ ಶ್ಯಾನುಬೋಗರುಗಳು ತುಂಬಾ ಅವಿವೇಕವನ್ನು ಮಾಡಿದ್ದಾರೆ. ತಪ್ಪು ಬರವಣಿಗೆಗಳನ್ನು ಮಾಡಿದ್ದಾರೆ. ಅವರು ಮಾಡಿದ ತಪ್ಪಿಗಾಗಿ ಈ ದಿವಸ ಕಂದಾಯವನ್ನು ರದ್ದು ಮಾಡುವುದಕ್ಕೆ ಬದಲಾಗಿ ಅದನ್ನು ಸಸ್‌ಪೆನ್‌ಷನಲ್ಲಿಡಲಾಗಿದೆ. ಅಲ್ಲಿ ೪ ವರ್ಷಗಳಿಂದ ಮಳೆ ಬಂದಿಲ್ಲ. ನೀರೇ ಇಲ್ಲದಿದ್ದಾಗ ಅಲ್ಲಿ ವಾಟರ್ ರೇಟ್ ಪ್ರಶ್ನೆ ಎಲ್ಲಿಂದ ಬರಬೇಕು? ಆ ಸುಳ್ಳು ಪಹಣಿ ಲೆಕ್ಕಗಳ ಆಧಾರದ ಮೇಲೆ ಅಸಿಸ್ಟೆಂಟ್ ಕಮಿಷನರ್ ಈ ದಿವಸ ನೋಟೀಸನ್ನು ಕೊಟ್ಟು ರೈತರಿಗೆ ತೊಂದರೆ ಕೊಡುತ್ತಿದ್ದಾರೆ. ಹಿಂದೆ ಈ ವಿಚಾರದಲ್ಲಿ ಅಪೀಲ್ ಹೋಗುವುದಕ್ಕೆ ಅವಕಾಶ ಮಾಡುವುದಾಗಿ ಹೇಳಿದ್ದರು. ಈ ದಿವಸ ಅದಕ್ಕೆ ಕಾನೂನಿನಲ್ಲಿ ಅವಕಾಶವೇ ಇಲ್ಲ. ಶ್ರೀರಾಮದೇವರ ನಾಲೆಯ ಕೆಳಗೆ ಸುಮಾರು ಒಂದು ಸಾವಿರ ಎಕರೆಗಳಲ್ಲಿ ಬೆಳೆಯಾಗಲಿಲ್ಲ. ಎಲ್ಲೆಲ್ಲಿ ಖಾಯಂ ನೀರು ಸರಬರಾಯಿ ವ್ಯವಸ್ಥೆ ಇದೆಯೋ ಅಲ್ಲಿ ವಾಟರ್ ರೇಟನ್ನು ಹಾಕಿ, ನಾನು ಬೇಡವೆನ್ನುವುದಿಲ್ಲ. ಇದು ಪಾರ್ಟಿ ಪ್ರಶ್ನೆಯಲ್ಲ. ಜನಜೀವನದ ಕಷ್ಟಕಾರ್ಪಣ್ಯಗಳ ವಿಚಾರ ಇದು. ಆದ್ದರಿಂದ ಯಾವ ಯಾವ ಕೆರೆಗಳ ಕೆಳಗೆ ೧೦೦೦ ಎಕರೆಗಳಿಗಿಂತ ಕಡಿಮೆ ಅಚ್ಚುಕಟ್ಟಿರುತ್ತದೆ ಅಂಥ ಕೆರೆಗಳ ಕೆಳಗಿರತಕ್ಕ ಅಚ್ಚುಕಟ್ಟಿಗೆ ಕಂದಾಯವನ್ನು ಪೂರ್ಣವಾಗಿ ಮಾಫೀ ಮಾಡಬೇಕೆಂದು ಹೇಳುತ್ತೇನೆ.

5-30 P.M.

ಶ್ರೀ ಹೆಚ್. ವಿ. ಕೌಜಲಗಿ (ಕಂದಾಯಶಾಖೆಯ ಮಂತ್ರಿಗಳು):—ಮಾನ್ಯ ಸಭಾಪತಿಗಳೇ, ಅನೇಕ ಸದಸ್ಯರು ಈವೊತ್ತಿನ ದಿವಸ ಈ ವಿಷಯಕ್ಕೆ ಸಂಬಂಧಿಸಿದ ಬಗ್ಗೆ ತಮ್ಮ ತಮ್ಮ ಭಾಷಣವನ್ನು ಮಾಡಿದ್ದಾರೆ. ಅಷ್ಟೇ ಅಲ್ಲದೆ ತಮ್ಮ ತಮ್ಮ ಜಿಲ್ಲೆಯಲ್ಲಿ ಲ್ಯಾಂಡ್ ರೆವಿನ್ಯೂ ವಸೂಲಿ ಬಗ್ಗೆ ಮತ್ತು ವಾಟರ್ ರೇಟ್ ವಸೂಲಿ ಬಗ್ಗೆ ರೈತರಿಗೆ ಏನೇನು ತೊಂದರೆಯಾಗುತ್ತಿದೆ ಎನ್ನುವುದರ ಬಗ್ಗೆ ಅನೇಕ ವಿಷಯಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಸಭೆಯ ಮುಂದೆ ಈಗಿರತಕ್ಕಂಥ ವಿಷಯಗಳು ಒಂದೇ ಆಗಿದ್ದರೂ ಕೂಡ ಇದರಲ್ಲಿ ಈಗ ಇದ್ದಂಥ ಕಾಯಿದೆ ಪ್ರಕಾರ ಲ್ಯಾಂಡ್ ರೆವಿನ್ಯೂ ಪದ್ಧತಿ ಮತ್ತು ವಾಟರ್ ಲೆವಿ ಪದ್ಧತಿ ಬಗ್ಗೆ ಇದರಲ್ಲಿ ಅನೇಕ ಲೋಪದೋಷಗಳು ಇವೆ. ಇದು ತಿದ್ದುಪಡಿ ಆಗಬೇಕು ಅನ್ನತಕ್ಕಂಥ ಒಂದು ಸೂಚನೆಯನ್ನೂ ಸಹ ಈ ಸಭೆಯ ಮುಂದೆ ಇಟ್ಟಿದ್ದಾರೆ. ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಏನು ತೊಂದರೆಗಳಿವೆ ಎನ್ನುವುದು ಬಡ್ಜೆಟ್ ಸೆಷನ್ ಕಾಲದಲ್ಲಿ ವಿರೋಧಪಕ್ಷದ ನಾಯಕರು ಹೇಳಿದಂತೆ ಅದು ಪಠಣವಾಯಿತು. ೧೯೬೪ರಲ್ಲಿ ಇದೇ ಮಾನ್ಯ ಸಭೆಯಲ್ಲಿ ಇಡೀ ಪ್ರಾಂತ್ಯಕ್ಕೆ ಸಂಬಂಧಪಟ್ಟಂತೆ ರೀಸೆಟಲ್‌ಮೆಂಟ್ ಪಾಸ್ ಆಯಿತು. ಸುದೈವದಿಂದ ವಿರೋಧಪಕ್ಷದ ನಾಯಕರೂ ಸಹಿತ ಅದನ್ನು ಒಪ್ಪಿಕೊಂಡರು. ಆವಾಗ ಅನೇಕ ದೋಷಗಳು ತಿಳಿಯಲಿಲ್ಲ. ಈಗ ಆ ದೋಷಗಳು ತಿಳಿಯಲಿಕ್ಕೆ ಸಾಧ್ಯವಾಯಿತು. ಅದರಲ್ಲಿ ಟೆಕ್ನಿಕಲ್ ಪಾಯಿಂಟ್ಸ್ ಇವೆ. ಇದನ್ನು ಯಾರು ಪ್ರತ್ಯೇಕವಾಗಿ ಅಭ್ಯಾಸ ಮಾಡುತ್ತಾರೋ ಅವರಿಗೆ ಇದರ ವಿಷಯ ತಿಳಿಯುತ್ತದೆ. ಇಲ್ಲದಿದ್ದರೆ ತಿಳಿಯಲು ಕಠಿಣವಾಗುತ್ತದೆ. ಈ ರೀತಿ ಅಭ್ಯಾಸ ಮಾಡಿದ ನಂತರ ಇವರಲ್ಲಿ ಕೆಲವು ದೋಷಗಳು ಇವೆ ಅವನ್ನು ತೆಗೆಯಬೇಕೆಂದು ಆಯಿತು. ಇದೇ ಮಾನ್ಯ ಮನೆಯಲ್ಲಿ ೧೧೪ ಮತ್ತು ೧೨೨ನೆಯ ನಿಯಮವನ್ನು ನಾವು ದುರಸ್ತುಮಾಡಿದೆವು. ಎಲ್ಲೆಲ್ಲಿ ಏನೇನಾಗಿದೆ ಎನ್ನುವುದನ್ನು ಮಾನ್ಯ ಶಿವಪ್ಪನವರೂ ಮತ್ತು ಅನೇಕ ಮಾನ್ಯ ಸದಸ್ಯರೂ ಕೂಡ ಹೇಳಿದ್ದಾರೆ. ಇದರ ಬಗ್ಗೆ ಗಾರ್ಡನ್ ಲ್ಯಾಂಡ್ ಯಾವುದು ಇದೆ ಅದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಆಗಿವೆ. ಕ್ಲಾಸಿಫಿಕೇಷನ್ ಒಳಗೆ ಸ್ವಲ್ಪ ತೊಡಕುಗಳು ಇರುವುದರಿಂದ ಜನರಿಗೆ ಸ್ವಲ್ಪ ತೊಂದರೆಯಾಗಿದೆ. ಈ ತೊಂದರೆಯನ್ನು ದೂರಮಾಡಬೇಕು ಎನ್ನುವ ಕರ್ತವ್ಯದಿಂದ ಮತ್ತು ದೇಶದ ಹಿತದೃಷ್ಟಿಯಿಂದ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ನಾವು ಈ ಎರಡು ನಿಯಮಗಳನ್ನು ದುರಸ್ತು ಮಾಡಿದೆವು. ಆ ನಿಯಮದ ಪ್ರಕಾರ ಕೆಲಸ ನಡೆದಿದೆ. ದುರಸ್ತು ಕೆಲಸ ನಡೆದಿಲ್ಲ ಎಂದು ಹೇಳುವ ಹಾಗಿಲ್ಲ ೧೧೪ ನೇ ಕಾಲಂನ ಪ್ರಕಾರ ಪುಣಸೂರು, ಚಿಕ್ಕಮಗಳೂರು ಮತ್ತು ಹಾಸನ ಈ ಭಾಗದಲ್ಲಿ ಕೆಲಸ ನಡೆದಿದೆ. ಮತ್ತು ಬಿಜಾಪುರದಲ್ಲಿ ೮ನೇ ಜೋನ್ ಮತ್ತು ಶಿವಮೊಗ್ಗದಲ್ಲಿ ೧ನೇ ಜೋನ್‌ನಲ್ಲೂ ಕೆಲಸ ನಡೆದಿದೆ. ೧೧೪ನೇ ನಿಯಮದ ಪ್ರಕಾರ ಅವರಿಗೆ ಒಪ್ಪಿಗೆ ಆಗಲಿಕ್ಕೆ ಅಲ್ಲಿ ಚೌಕಾಸಿ ನಡೆಸಿದೆವು. ಬಾಕಿ ಭಾಗದಲ್ಲಿ ೧೨೨ನೇ ನಿಯಮದ ಪ್ರಕಾರ ನೋಟೀಸ್ ಕೊಟ್ಟಿವೆ. ಕೆಲವು ಕಡೆ ನೋಟೀಸ್ ಕೊಡಲಿಕ್ಕೆ ಹತ್ತಿದ್ದೇವೆ. ಈ ರೀತಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಏನಾದರೂ ತೊಂದರೆ ಇದ್ದರೆ ಸರಿಪಡಿಸಿ ಮಾಡಲಿಕ್ಕೆ ೧೨೨ನೇ ಕಾಲಂ ಪ್ರಕಾರ ಅವಕಾಶ ಇದೆ. ಆ ಉದ್ದೇಶ ಇಟ್ಟುಕೊಂಡು ಕಾಯಿದೆ ಮಾಡಿದೆವು. ಆ ಕಾಯಿದೆ ಕೆಲಸ ಸರಿಯಾದ ದುರಸ್ತಿಯಲ್ಲಿ ನಡೆದಿದೆ. ಶ್ರೀಮಾನ್ ದೇವೇಗೌಡರು ನಮ್ಮ ಭಾಗದಲ್ಲಿ ನಡೆದಿಲ್ಲ ಎಂದು

ಹೇಳಿದರು. ಅಲ್ಲಿ ನೋಟೀಸ್ ಕೆಲಸ ನಡೆದಿವೆ. ೪ನೇ ಜೋನ್‌ನಲ್ಲಿ ಈ ಪ್ರಕಾರ ಮಾಡಬೇಕು ಎಂದು ಏನು ಒಪ್ಪಿಕೊಂಡಿದ್ದೇವೋ ಅದರಂತೆ ಕೆಲಸ ಮಾಡಿದೆವು.

ಶ್ರೀ ಹೆಚ್.ಡಿ. ದೇವೇಗೌಡ:—ನಾನು ಹೇಳಿದ್ದು ನೋಟೀಸ್ ಕೊಡದೆ ಕಲೆಕ್ಷನ್ ಮಾಡುತ್ತಿದ್ದಾರೆ ಎಂದು.

ಶ್ರೀ ಹೆಚ್.ವಿ. ಕೌಜಲಗಿ:—ಯಾವ ಪ್ರಕಾರವೇ ಇರಲಿ. ೧೧೪ನೇ ನಿಯಮದ ಪ್ರಕಾರ ನೋಟೀಸ್ ಕೊಡುತ್ತಾರೆ. ಎಲ್ಲೆಲ್ಲಿ ತಕರಾರು ಇವೆ ಅಂಥ ಕಡೆ ೧೨೨ರ ಪ್ರಕಾರ ನೋಟೀಸ್ ಕೊಡುತ್ತಾರೆ. ಹಳೆಯ ಮೈಸೂರಿನಲ್ಲಿ ಹಳೆಯ ಕಂದಾಯವನ್ನು ವಸೂಲ್ಮಾಡುವುದಕ್ಕೆ ಹೇಳಿದೆವು. ಹೊಸ ಕಂದಾಯವನ್ನು ಬರುವುದಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ:—ನೀವು ಕೊಟ್ಟ ವಚನವನ್ನು ಉಳಿಸಿಕೊಳ್ಳಿ.

ಶ್ರೀ ಹೆಚ್. ವಿ. ಕೌಜಲಗಿ:—ಅರಿಯರ್ಸ್ ವಸೂಲ್ಮಾಡುವುದು ನಮ್ಮ ಕರ್ತವ್ಯ. ಆದರಿಂದ ವಸೂಲ್ಮಾಡುತ್ತೇವೆ.

ಶ್ರೀ ಎಲ್. ಶ್ರೀಕಂಠಯ್ಯ:—ಬಹುಶಃ ಇದರಿಂದ ೬ ಕೋಟಿ ರೂಪಾಯಿ ವರಮಾನ ಬರಬಹುದು. ಇದನ್ನು ಬೇರೆ ಯಾವ ತರಹದಿಂದಲಾದರೂ ವಸೂಲ್ಮಾಡಬಹುದು. ಆದುದರಿಂದ ಈ ಕಂದಾಯವನ್ನು ವಜಾ ಮಾಡಿಬಿಡಿ.

ಶ್ರೀ ಹೆಚ್. ವಿ. ಕೌಜಲಗಿ:—ಮಾನ್ಯ ಹಣಕಾಸಿನ ಸಚಿವರು ಮೊನ್ನೆ ದಿವಸ ಇದಕ್ಕೆ ಉತ್ತರ ಕೊಟ್ಟಿದ್ದಾರೆ.

ಶ್ರೀ ಎನ್.ಎ. ಚನ್ನೇಗೌಡ:—ತಮಗೆ ಗೊತ್ತಿದ್ದ ಹಾಗೆ ಈಗ ಹಾಕಿರತಕ್ಕಂಥ ಕಂದಾಯ ಹೆಚ್ಚುವರಿ ಎಂದು ಅನೇಕ ಸದಸ್ಯರು ಹೇಳಿದರು, ೫ ವರ್ಷದಿಂದ್ಲೂ ನೀರಿನ ತೆರಿಗೆ ವಸೂಲ್ಮಾಡುವುದು ಕಷ್ಟ. ಜನರು ಕೊಡುವ ಸ್ಥಿತಿಯಲ್ಲಿಲ್ಲ; ರೈತರಿಗೆ ತೊಂದರೆಯಾಗುತ್ತದೆ; ಇದಕ್ಕೆ ನೀವೇ ಕಾನೂನು ಮಾಡಿದರೆ ಗೊತ್ತಾಗುವುದಿಲ್ಲ; ಆದುದರಿಂದ ಇದಕ್ಕೆ ಒಂದು ತಜ್ಞರುಗಳ ಒಂದು ಕಮಿಟಿ ಮಾಡಿ ರೈತರಿಗೆ ಏನೇನು ತೊಂದರೆ ಇದೆ ಎಂದು ಗೊತ್ತಾಗುತ್ತದೆ ಆ ರೀತಿ ಮಾಡಿ.

ಶ್ರೀ ಹೆಚ್.ವಿ. ಕೌಜಲಗಿ:— ಲ್ಯಾಂಡ್ ವಸೂಲಿ ಬಗ್ಗೆ ದುರಸ್ತಿ ಮಾಡಿದೆವು. ನಿಯಮಗಳ ಪ್ರಕಾರ ಕೆಲಸ ನಡೆದಿದೆ. ತಮ್ಮ ಭಾಗದಲ್ಲಿ ಏನಾದರೂ ತೊಂದರೆ ಆಗಿದ್ದರೆ ಅದನ್ನು ಹೇಳಿದರೆ ಅದನ್ನೂ ಸರಿಪಡಿಸಲಿಕ್ಕೆ ಸಾಧ್ಯವಾಗುತ್ತದೆ. ಇದರ ಬಗ್ಗೆ ಇನ್ನೂ ತೀವ್ರವಾದ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಸರ್ವೆ ಡಿಪಾರ್ಟ್‌ಮೆಂಟನ್ನು ವಿಸ್ತರಿಸಿ ಇನ್ನೂ ಹೆಚ್ಚಿನ ದಕ್ಷತೆ ಇರತಕ್ಕಂಥ ತಜ್ಞರನ್ನು ನೇಮಿಸಿ ತೀವ್ರ ಕೆಲಸ ಮಾಡಬೇಕು ಎನ್ನುವ ಕಾರ್ಯ ನಡೆಯುತ್ತಿದೆ. ಆದುದರಿಂದ ತಮ್ಮ ತಮ್ಮ ಕಾನ್ಸಿಟ್ಯೂಯೆನ್ಸಿನಲ್ಲಿ ಏನು ನೋಟೀಸ್ ಬರುತ್ತದೆ ಅದು ಫೈನಲ್ ಅಲ್ಲ. ಈಗ ಕೆಲಸ ಸರಿಯಾಗಿ ನಡೆಯುತ್ತಾ ಇದೆ. ಇದರಲ್ಲಿ ಏನಾದರೂ ಅಡಚಣೆ ಇದ್ದರೆ ಅದನ್ನು ಸರಿಮಾಡಲಿಕ್ಕೆ ಸಿದ್ಧರಾಗಿದ್ದಾರೆ. ನಾವು ರೈತರಿಗೆ ತೊಂದರೆ ಮಾಡಬೇಕು ಎನ್ನುವುದೇನೂ ಇಲ್ಲ ಮತ್ತು ಅವರಿಗೆ ಹೆಚ್ಚಿನ ಕಂದಾಯ ಹಾಕಬೇಕು ಎನ್ನುವ ಉದ್ದೇಶವೂ ಇಲ್ಲ.

ಇನ್ನು ಕಳೆದ ೪ ವರ್ಷದಿಂದಲೂ ರಾಜ್ಯದಲ್ಲಿ ಕೆಲವು ಕಡೆ ಮಳೆ ಆಗಿಲ್ಲದೆ ಬೆಳೆಯೂ ಆಗಿಲ್ಲ. ಇದರಿಂದ ಸಾಕಷ್ಟು ವಸೂಲಿಯೂ ಆಗಿಲ್ಲ ಎಂದು ಹೇಳಿದ್ದೇನೆ. ೧೯೬೮ನೇ ಇಸವಿಯಲ್ಲಿ ಎಲ್ಲೆಲ್ಲಿ ಮಳೆ ಆಗಿಲ್ಲವೋ ಅಂತಹ ಕಡೆ ರೆಮಿಷನ್ ಕೊಡಬೇಕೆಂದು ನಿಯಮಗಳನ್ನು ಮಾಡಿ ರೆಟ್ರಾಸ್ಪೆಕ್ಟೀವ್ ಎಫೆಕ್ಟ್‌ದಿಂದ ಕೊಡಬೇಕೆಂದು ಮಾಡಿದೆವು. ಆ ಪ್ರಕಾರ ಎಲ್ಲೆಲ್ಲಿ ಮಳೆ ಆಗಿಲ್ಲವೋ ಅಲ್ಲಿ ರೆಮಿಷನ್ ಕೊಡಬೇಕೆಂದು ಹೇಳಿದ್ದೇವೆ. ಮತ್ತು ಅಲ್ಲೆಲ್ಲಾ ಡೆಪ್ಯೂಟಿ ಕಮೀಷನರನ್ನು ಪ್ರಪೋಸಲ್ಸ್ ಕಳುಹಿಸಬೇಕೆಂದು ಹೇಳಿದ್ದೇವೆ. ಅನೇಕ ಕಡೆ ಪ್ರಪೋಸಲ್ಸ್ ಬಂದಿದೆ. ಅಂತಹ ಕಡೆ ರೆಮಿಷನ್ ಕೊಟ್ಟಿದ್ದೇವೆ. ಇನ್ನೂ ಪ್ರಪೋಸಲ್ಸ್ ಬರುವುದು ಇದೆ. ಪ್ರಪೋಸಲ್ಸ್ ಬಂದುಬಂದಾಗಲೆಲ್ಲಾ ರೆಮಿಷನ್ ಕೊಡುತ್ತಿದ್ದೇವೆ. ತಾವು ವಿಚಾರ

(ಶ್ರೀ ಹೆಚ್. ವಿ. ಕೌಜಲಗಿ)

ಮಾಡಬಹುದು. ಕೆಲವು ಫಿಗರ್ಸ್ ಬೇಕಾದರೆ ಹೇಳುತ್ತೇನೆ. ಕೋಲಾರದಲ್ಲಿ ೧೯೬೫-೬೬ಕ್ಕೆ ೧೫ ೧/೨ ಲಕ್ಷ ಕೊಟ್ಟಿದೆ. ೧೯೬೬-೬೭ಕ್ಕೆ ೫ ಲಕ್ಷ ಕೊಟ್ಟಿದೆ, ೧೯೬೭-೬೮ಕ್ಕೆ ೭ ಲಕ್ಷ ಕೊಟ್ಟಿದೆ. ಇನ್ನು ೧೯೬೮-೬೯ರ ಪ್ರಪೋಸಲ್ಸ್ ಕೂಡ ಬಂದಿದೆ. ತುಮಕೂರಿನಿಂದ ಮೊನ್ನೆತಾನೇ ಪ್ರಪೋಸಲ್ಸ್ ಬಂದಿದೆ. ಇನ್ನು ಚಿತ್ರದುರ್ಗ, ರಾಯಚೂರು, ಗುಲ್ಬರ್ಗ, ಬೆಂಗಳೂರು ಈ ಕಡೆಗಳಿಂದ ಪ್ರಪೋಸಲ್ಸ್ ಕೂಡ ಬಂದಿವೆ. ಹಾಸನದಿಂದ ಪ್ರಪೋಸಲ್ಸ್ ೬೫-೬೬ ರದ್ದು ಬಂದಿದೆ. ಅಲ್ಲಿ ಒಂದು ವರ್ಷಕ್ಕೆ ೧೦ ಲಕ್ಷ ರೂಪಾಯಿ ಆಗುತ್ತದೆ. ಎಷ್ಟೋ ಕಡೆ ಶ್ಯಾನುಭೋಗರು ಇಲ್ಲದೆ ಲೆಕ್ಕ ಸರಿಯಾಗಿ ಕೊಟ್ಟಿಲ್ಲ. ಆದರೂ ಸಹಿತ ಡೆಪ್ಯೂಟಿ ಕಮೀಷನರ್‌ಗೆ ಸೂಚನೆ ಕೊಟ್ಟೆವು. ಏನೆಂದರೆ ಎಲ್ಲಿ ಮಳೆ ಬೆಳೆ ಆಗಿಲ್ಲವೋ ಅಲ್ಲಿಗೆ ಹೋಗಿ ರೈತರನ್ನು ಕೇಳಿಕೊಂಡು, ಅಲ್ಲಿಯ ಜನರ ಅಭಿಪ್ರಾಯವನ್ನು ಕೇಳಿಕೊಂಡು ಪ್ರಪೋಸಲ್ಸ್ ಕಳುಹಿಸಬೇಕು ಎಂದು ಅವರಿಗೆ ಸೂಚನೆ ಕೊಟ್ಟೆವು. ೧೯೬೫ನೇ ಇಸವಿಯಲ್ಲಿ ಯಾರು ಯಾರು ಅಪೀಲು ಮಾಡಿದರೋ ಅವರಿಗೆಲ್ಲಾ ರೆಮಿಷನ್ ಕೊಟ್ಟೆವು. ಆ ಪ್ರಪೋಸಲ್ಸ್ ಕೂಡ ಇದೆ. ಬೇಕಾದರೆ ಕೊಡುತ್ತೇನೆ. ಆದುದರಿಂದ ಸದಸ್ಯರು ಯಾರು ಕೂಡ ಅನ್ಯಾಯ ಮಾಡಿದ್ದಾರೆ. ಅನೇಕ ತೊಂದರೆ ಕೊಟ್ಟು ವಸೂಲ್ ಮಾಡುತ್ತಿದ್ದಾರೆ ಎಂದು ತಿಳಿದುಕೊಳ್ಳಬಾರದು. ಸರ್ಕಾರದವರು ಏನು ಕೆಲಸ ಮಾಡಬೇಕೋ ಅದನ್ನು ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳಿಂದ ಯಾವ ಯಾವ ಕಾಲಕ್ಕೆ ಪ್ರಪೋಸಲ್ಸ್ ಬರುತ್ತದೋ ಆ ರೀತಿ ಬಂದಂತೆಲ್ಲಾ ವಸೂಲಿ ಬಂದ್ ಆಗುತ್ತದೆ. ಇಲ್ಲದಿದ್ದರೆ ವಸೂಲಿಯನ್ನು ಬಂದ್ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಹಂಜಿ ಶಿವಣ್ಣ:—ನಮ್ಮ ಭಾಗದ್ದು ಬರಗಾಲ ಪ್ರದೇಶ. ಅದರ ಬಗ್ಗೆ ತಾವು ಏನೂ ಹೇಳಲಿಲ್ಲ.

ಶ್ರೀ ಹೆಚ್.ವಿ. ಕೌಜಲಗಿ:—ತಮಗೆ ವಾಸ್ತವವಾಗಿ ಯಾವ ವರ್ಷ ರೆಮಿಷನ್ ಸಿಕ್ಕಬೇಕಾಗಿತ್ತು ಅದನ್ನು ಸರ್ಕಾರದವರು ಮಾಡಿಕೊಡಲಿಲ್ಲ ಎಂದು ಸರ್ಕಾರದ ಗಮನಕ್ಕೆ ತಂದರೆ ಅದನ್ನು ಎಕ್ಸಾಮಿನ್ ಮಾಡುತ್ತೇವೆ.

ಶ್ರೀ ಬಿ.ಎನ್. ರಾಮೇಗೌಡ:—ಸ್ವಾಮಿ, ಗುಬ್ಬಿ ತಾಲ್ಲೂಕು ವಿಷಯವಾಗಿ ರೆಮಿಷನ್ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಹೆಚ್.ವಿ. ಕೌಜಲಗಿ:—ತುಮಕೂರು ಡಿಸ್ಟ್ರಿಕ್ಟ್ ಪ್ರಪೋಸಲ್ಸ್ ಈಗ ಬಂದಿದೆ. ಅದರಲ್ಲಿ ನಿಮ್ಮ ಗುಬ್ಬಿ ತಾಲ್ಲೂಕು ಸೇರಿರುತ್ತದೆ.

ಅಧಿಕಾರಿಗಳು ಕೊಟ್ಟಿರುವ ಅಂಕಿ ಸಂಖ್ಯೆಗಳು ಹೀಗಿವೆ :—

೬೬–೬೭ರಲ್ಲಿ ೧೩,೬೫,೦೦೦, ೬೮–೬೯ರಲ್ಲಿ ೧೭,೬೯,೦೦೦ ಮತ್ತು ೧೯೬೯ರಲ್ಲಿ ೮ ಲಕ್ಷ ರೂಪಾಯಿಗಳನ್ನು ವಸೂಲಿ ಮಾಡಬೇಕಾಗಿತ್ತು. ಇದರಲ್ಲಿ ಇಲ್ಲಿಯವರೆಗೆ ಇನ್ನೂ ವಸೂಲುಮಾಡಿಲ್ಲ ಎಂದು ಡಿ. ಸಿ. ಕಡೆಯಿಂದ ನಮಗೆ ರಿಪೋರ್ಟ್ ಬಂದಿದೆ.

ಶ್ರೀ ಎನ್. ಎ. ಚನ್ನೇಗೌಡ :—ಆದರೆ ಅಧಿಕಾರಿಗಳು ಇನ್ನೂ ವಸೂಲು ಮಾಡುತ್ತಲೇ ಇದ್ದಾರೆ.

ಶ್ರೀ ಹೆಚ್. ವಿ. ಕೌಜಲಗಿ :—ಒಂದು ತಾಲ್ಲೂಕಿನಲ್ಲಿ ಇರುವ ನೂರು ಹಳ್ಳಿಗಳಲ್ಲಿ ೬೦–೭೦ ಹಳ್ಳಿಗಳಲ್ಲಿ ಕಂದಾಯ ಮಾಫಿ ಮಾಡಬೇಕೆಂದು ಸಲಹೆ ಬಂದರೆ ಇತರ ಉಳಿಕೆ ಹಳ್ಳಿಗಳಲ್ಲಿಯೂ ಕೂಡ ಅಧಿಕಾರಿಗಳು ಕಂದಾಯವನ್ನು ವಸೂಲು ಮಾಡಲಿಕ್ಕೆ ಬರುವುದಿಲ್ಲ.

ಶ್ರೀ ಎನ್. ಎ. ಚನ್ನೇಗೌಡ :—ನಾಗಮಂಗಲದ ತಾಲ್ಲೂಕಿನಲ್ಲಿ ೧೨೩ ಹಳ್ಳಿಗಳಿಗೆ ನೀರಿಲ್ಲದೆ ಬೆಳೆ ಆಗಿಲ್ಲ. ಇಲ್ಲಿನ ಜನರಿಗೆ ಕಷ್ಟವಾಗಿದೆ ಮತ್ತು ಇದಕ್ಕೆ ಪರಿಹಾರ ಕೊಡಿಸಬೇಕು ಎಂದು ಜಿಲ್ಲಾಧಿಕಾರಿಗಳ ಕಡೆಗೆ ಕಾಗದ ಬರೆದಿದ್ದರೂ ಅದನ್ನು ಅವರ ಪ್ರಪೋಸಲ್‌ನಲ್ಲಿ ಸೇರಿಸಿ ಇನ್ನೂ ಕಳುಹಿಸಿಲ್ಲ.

ಶ್ರೀ ಹೆಚ್. ವಿ. ಕೌಜಲಗಿ :—ಯಾವುದಾದರೂ ನಿರ್ದಿಷ್ಟವಾದ ಕಡೆಯಲ್ಲಿ ಅನಾನುಕೂಲಗಳಾಗಿವೆ ಎನ್ನುವುದನ್ನು ನನ್ನ ಗಮನಕ್ಕೆ ತಂದರೆ ನಾನು ಅದನ್ನು ಪುನಃ ರೀ ಎಕ್ಸಾಮಿನ್ ಮಾಡಿಸುತ್ತೇನೆ. ಸರ್ಕಾರದವರು ಒತ್ತಾಯದಿಂದ ಎಲ್ಲೂ ವಸೂಲು ಮಾಡಿಲ್ಲ ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.

ನಿಮಗೆ ಹೋದ ವರ್ಷದಲ್ಲಿ ಏನು ಫಿಗರ್ಸ್ ಇತ್ತು ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ನಮಗೇನು ವಸೂಲಿ ಬರಬೇಕಾಗಿತ್ತು ಅದರಲ್ಲಿ ಸುಮಾರು ಒಂದು ಕೋಟಿಯಷ್ಟು ಹಣ ಕಡಿಮೆ ಬಂದಿದೆ. ಇದರಿಂದ ನಾವು ಎಲ್ಲೂ ಯಾರಿಂದಲೂ ಕಡ್ಡಾಯವಾಗಿ ವಸೂಲೂ ಮಾಡಿಲ್ಲ.

ಶ್ರೀ ಎಲ್. ಶ್ರೀಕಂಠಯ್ಯ :—೧೯೬೫ನೇ ಇಸವಿಯಿಂದ ಏನು ಕಂದಾಯ ಎಂದು ನಿಗದಿಯಾಗಿತ್ತೋ ಅದರಂತೆ ಏಕೆ ಇಲ್ಲಿಯವರೆಗೆ ವಸೂಲು ಮಾಡಲಿಲ್ಲ?

ಶ್ರೀ ಹೆಚ್. ವಿ. ಕೌಜಲಗಿ :—ಏಕೆ ವಸೂಲು ಮಾಡಲಿಲ್ಲ ಎನ್ನುವುದಕ್ಕೆ ಕಾರಣ ಬೇರೆ ಇತ್ತು. ೧೯೬೪ರಲ್ಲಿ ಬೇರೆ ಕಾನೂನು ಇತ್ತು ಮತ್ತು ಇದರಂತೆ ಹೊಸ ಸವಲತ್ತುಗಳನ್ನು ಕೊಡಬೇಕಾಯಿತು. ನೀವೇರಿಟ್ರಾಸ್‌ಪೆಕ್ಟೀವ್ ವಿಚಾರ ಹೇಳಿ ಪುನಃ ಇದರ ಬಗ್ಗೆ ಮತ್ತೆ ಹೇಳಿದರೆ ನಾವೇನು ಇದಕ್ಕೆ ಹೇಳುವುದು.

ಶ್ರೀ ಕೆ. ಎಚ್. ರಂಗನಾಥ್ :—ಈ ವಿಚಾರದಲ್ಲಿ ನಾನು ಹೇಳುವುದು ಹಳೆಯ ಮೈಸೂರಿನಲ್ಲಿ ಇರುವ ಎಂಟು ಜಿಲ್ಲೆಗಳಲ್ಲಿ ೧೯೬೧ರಲ್ಲಿ ರೀಸೆಟಲ್‌ಮೆಂಟು ಸರ್ವೆ ಮಾಡುತ್ತೇವೆಂದು ಹೇಳಿದ್ದರು. ಇದರಂತೆ ಮಾಡಿ ಇಲ್ಲಿ ಸ್ಟಾಂಡರ್ಡ್ ರೇಟು ಏನು ಎನ್ನವುದನ್ನು ತರಿ, ಖುಷ್ಕಿ ಹಾಗೂ ಬಾಗಯಿತು ರೇಟು ಏನು ಎನ್ನುವುದು ನಿಗದಿ ಮಾಡಲಾಗಿದ್ದರೂ ಇಲ್ಲಿರುವ ಅಧಿಕಾರಿಗಳು ತಮ್ಮ ಮನಸ್ಸಿಗೆ ಬಂದಂತೆ ರೇಟುಗಳನ್ನು ಚಾರ್ಜ್ ಮಾಡುತ್ತಾ ಇರುವುದರಿಂದ ಇಷ್ಟು ಕಷ್ಟವಾಗಿದೆ ಮತ್ತು ೬೫-೬೬ರಲ್ಲಿ ವಾಟರು ರೇಟು ಏನು ಎನ್ನುವುದನ್ನು ನಿಗದಿ ಮಾಡಿರುವಾಗ ಅಧಿಕಾರಿಗಳು ಇಷ್ಟ ಬಂದಂತೆ ವಸೂಲಿ ಮಾಡುವುದು ರೂಲ್ಸ್‌ಗೆ ವಿರುದ್ಧವಾಗುತ್ತಿದ್ದೆ. ಆದರೆ ತಾವು ಸರಕಾರದ ವತಿಯಿಂದ ಒಂದು ಸರ್‌ಕ್ಯುಲರು ಬೇರೆ ಕಳುಹಿಸಿ ಕಂದಾಯ ವಸೂಲು ಮಾಡಬೇಕೆಂದು ಹೇಳಿದರೆ ಇದು ಸರಿಯಾಗುತ್ತದೆಯೇ ? ಇದನ್ನು ಸರಿ ಮಾಡಬೇಕೆಂದು ನಾವು ಇಲ್ಲಿ ಹೇಳುತ್ತಿದ್ದೇವೆ.

ಶ್ರೀ ಹೆಚ್. ವಿ. ಕೌಜಲಗಿ :—ಹಾಗೇನಾಗಿಲ್ಲ. ೬೬–೬೭, ೬೭–೬೮ ಹಾಗೂ ೬೮–೬೯ ಈ ಮೂರು ವರ್ಷಗಳಲ್ಲಿ ಏನು ರಿವಿಷನ್ ಆಗಬೇಕು ಎಂದು ವಿಚಾರ ಮಾಡುವ ಸಲುವಾಗಿ ಜಿಲ್ಲಾಧಿಕಾರಿಗಳಿಂದ ಎಲ್ಲ ರಿಕಾರ್ಡುಗಳನ್ನು ತರಿಸಿ ಪರಿಶೀಲನೆ ಮಾಡಿ ನೋಡಲಾಗಿದೆ. ಯಾವ ಕಡೆಯಿಂದಲೂ ಕೂಡ ಒತ್ತಾಯದಿಂದ ವಾಟರ್ ರೇಟನ್ನು ವಸೂಲು ಮಾಡದ ವಿಚಾರ ಬಂದಿಲ್ಲ. ಇದರ ಬಗ್ಗೆ ಬೇಕಾದರೆ ಪುನಃ ನೋಡೋಣ. ನನಗೆ ತಿಳಿದ ಹಾಗೆ ಈ ಮಾರ್ಚಿ ತಿಂಗಳೊಳಗೆ ಯಾವ ಕಡೆಯಲ್ಲೂ ಒತ್ತಾಯದಿಂದ ಕಂದಾಯವನ್ನು ವಸೂಲುಮಾಡಿಲ್ಲ, ವಾಟರು ರೇಟು ವಿಚಾರ ಬೇರೆ, ಲ್ಯಾಂಡ್ ರೆವಿನ್ಯೂ ವಿಚಾರವೇ ಬೇರೆ ೧೯೬೫ರಲ್ಲಿ ರೀಸೆಟಲ್‌ಮೆಂಟ್ ಆಗುವುದಕ್ಕೆ ಮುಂಚೆ ಬೇರೆ ರೀತಿಯಾಗಿ ವಾಟರು ರೇಟು ಇತ್ತು.

ಈ ಕಾಯದೆ ೧೯೬೮ನೇ ಇಸವಿಯಲ್ಲಿ ಪಾಸು ಆದ ಮೇಲೆ, ರಿಟ್ರಾಸ್‌ಪೆಕ್ಟೀವ್ ಆಗಿ ೧ನೇ ಜುಲೆ ೧೯೬೫ರಿಂದ ಅಮಲಿನಲ್ಲಿ ತರಬೇಕೆಂದು ಇದರ ರೂಲ್ಸು ೧೯೬೯ರಲ್ಲಿ ಆಯಿತು. ಈ ರೂಲ್ಸುಗಳು ಬಂದ ಮೇಲೆ ಡ್ರೈ ಲ್ಯಾಂಡು ಅಸೆಸ್‌ಮೆಂಟ್ ಬೇರೆ, ವಾಟರು ರೇಟೇ ಬೇರೆ ಎಂದು ಮಾಡಿರುವುದರಿಂದ ೧ನೇ ಮೇ ೧೯೬೧ ರಿಂದ ವಾಟರು ರೇಟು ಲೆವಿಯಂತೆ ವಸೂಲು ಮಾಡಲಾಗಲಿಲ್ಲ. ಕೆಲವು ಕಡೆ ಜನರಿಗೆ ತೊಂದರೆಯಾಗಿರಬಹುದು. ಇಲ್ಲೂ ಕೂಡ ಅನೇಕ ಸದಸ್ಯರು ರೈತರು ನೀರು ಉಪಯೋಗಿಸಿಕೊಳ್ಳದೇ ಇದ್ದರೂ ಕೆಲವು ಕಡೆ ಅಧಿಕಾರಿಗಳು ವಾಟರು ರೇಟಿಗಾಗಿ ನೋಟೀಸು ಕೊಟ್ಟಿದ್ದಾರೆಂದು ಹೇಳಿದರು. ಇದರಲ್ಲಿ ಎಲ್ಲೋ ವಾಟರು ಕಾಯದೇ ಪ್ರಕಾರ ದೋಷ ಇರಬಹುದು. ಇದಕ್ಕಾಗಿ ರೆವಿನ್ಯೂ ಖಾತೆಗೆ ಒಂದು ಸೂಚನೆ ಕೊಡಲಾಗಿದೆ. ಇದರಂತೆ ಪ್ರತಿಯೊಂದು ಕಡೆ ಇರುವ ಕೆರೆಗಳಲ್ಲಿ ನೀರು ಇದೆಯೋ ಇಲ್ಲವೇ. ನೀರಿದ್ದರೆ ಯಾವ ಸರ್ವೆ ನಂಬರಿಗೆ ನೀರು ಕೊಟ್ಟಿದ್ದಾರೆ ಮತ್ತು ಎಲ್ಲಿ ಕೊಡಲಿಲ್ಲ ಎನ್ನುವ ರಿಪೋರ್ಟ್ ಕಳುಹಿಸಬೇಕು ಎಂದು ಅಧಿಕಾರಿಗಳಿಗೆ ಹೇಳಲಾಗಿದೆ. ಇವರು ಕೊಟ್ಟ ಮಾಹಿತಿ ಪ್ರಕಾರ ಎಲ್ಲಿ ತಪ್ಪಾಗಿರುತ್ತೋ ಅದನ್ನು ಸರಿಮಾಡಲು ಆಯಾ ಡಿವಿಜನ್‌ನಲ್ಲಿರುವ ಅಸಿಸ್ಟೆಂಟು ಕಮಿಷನವರರಿಗೆ ಅವಕಾಶ ಮಾಡಿಕೊಡಲಾಗಿದೆ. ಇದರಲ್ಲಿ ಬಡ ಜನರಿಗೆ ಬಹಳ ತೊಂದರೆಗಳಾಗುತ್ತಿವೆ ಎನ್ನುವ ಪ್ರಶ್ನೆ ಇದರಲ್ಲಿ ಬಂತು. ಇದಕ್ಕಾಗಿ ನಾನು ನಿನ್ನೆ ದಿವಸ ಇದರ ಬಗ್ಗೆ ಒಂದು ಉಪಾಯ ಕಂಡು ಹಿಡಿದಿದ್ದೇನೆ. ನಿನ್ನೆ ದಿವಸ ನಮ್ಮ ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳೂ ಒಂದು ಸಭೆಗಾಗಿ ಇಲ್ಲಿಗೆ ಬಂದಿದ್ದರು. ಅವರಿಗೂ ಕೂಡ ಇದರ ಬಗ್ಗೆ ನಾನು ಸೂಚನೆಗಳನ್ನು ಕೊಟ್ಟೀದ್ದೇನೆ. ಆಯಾ ಜಿಲ್ಲೆಯಲ್ಲಿ ಅಸಿಸ್ಟೆಂಟ್ ಕಮಿಷನರ ಜೊತೆಗೆ ಒಬ್ಬರು ಅಸಿಸ್ಟೆಂಟ್ ಇಂಜನೀಯರರನ್ನು ಕೊಟ್ಟು, ಅವರು ಎಲ್ಲ ತಾಲ್ಲೂಕುಗಳಲ್ಲಿರುವ ಕೆರೆಗಳನ್ನು ಅಥವಾ ನೀರಿನ ಆಸರೆ ಇರುವ ಅಥವಾ ಇಲ್ಲದೇ ಇರುವ ಜಾಗಗಳನ್ನೆಲ್ಲಾ ನೋಡಿಕೊಂಡು ಇಲ್ಲಿನ ಜನರಿಗೆ ಏನೇನು ಕಷ್ಟಗಳಿವೆ ಅವನ್ನೆಲ್ಲಾ ಅದೇ ಸ್ಥಳದಲ್ಲೇ ಜನರಿಂದ ಕೇಳಿಕೊಂಡು ಅವರೇ ನಿರ್ಣಯ ಕೊಡಬೇಕೆಂದು

(ಶ್ರೀ ಹೆಚ್. ವಿ. ಕೌಜಲಗಿ)

ಅವರಿಗೆ ಹೇಳಲಾಗಿದೆ. ಅವರೇ ಇದರ ಬಗ್ಗೆ ಚೌಕಾಸಿಮಾಡಿ ಸರಿಯಾದ ಒಂದು ತೀರ್ಮಾನ ಕೊಟ್ಟು ಜನರಿಗೆ ಸಹಾಯ ಮಾಡಬೇಕೆಂದು. ಮತ್ತು ಆಯಾ ಜನರು ಕೊಡುವ ಓರಲ್ ಸ್ಟೇಟ್‌ಮೆಂಟ್‌ಗಳನ್ನು ಅಪೀಲುಗಳೆಂದೇ ಭಾವಿಸಿ ತಿರ್ಮಾನ ಕೊಡಬೇಕೆಂದೂ ಹೇಳಲಾಗಿದೆ ಮತ್ತು ಇಲ್ಲಿ ಕಾನೂನು ಕೂಡ ಸರಿಯಾಗಿ ಲಾಗು ಆಗುವಂತೆ ಮಾಡಬೇಕೆಂದು ಹೇಳಲಾಗಿದೆ. ಪ್ರತಿಯೊಬ್ಬ ಅಸಿಸ್ಟೆಂಟ್ ಕಮೀಷನವರವರ ಜೊತೆಗೆ ಒಬ್ಬರು ಅಸಿಸ್ಟೆಂಟ್ ಇಂಜಿನೀಯರುರವರನ್ನೂ ಕೂಡಿಸಿಕೊಂಡು ಇಲ್ಲಿ ಒಟ್ಟಾಗಿ ಕೆಲಸ ಮಾಡಿ ಜನರಿಗೆ ಅನುಕೂಲ ಮಾಡಿಕೊಡಲಿ ಎಂದು ಈ ರೀತಿ ಮಾಡಲಾಗಿದೆ. ಇದರಲ್ಲಿ ಎಷ್ಟು ಕೇಸುಗಳು ವಜಾ ಆಗುತ್ತವೆ ಮತ್ತು ಎಲ್ಲಿ ಸರಿಯಾಗಿ ನೋಟೀಸು ಕೊಡಬಹುದು ಎನ್ನುವುದನ್ನು ನೋಡಿಕೊಂಡು ಮುಂದಿನ ವರ್ಷ ನೋಟೀಸು ಕೊಡುವುದಕ್ಕೆ ಕಾಲಾವಕಾಶ ಇದೆ. ಇದಕ್ಕಾಗಿ ಇಂತಹ ಒಂದು ಷಾರ್ಟ್ ಕಟ್ ದಾರಿ ಮಾಡಬೇಕೆಂದು ಮಾಡಲಾಗಿದೆ.

ಆದರೆ ಈ ಪದ್ಧತಿ ತಪ್ಪಾಗುತ್ತದೆ. ಕನ್ಸಾಲಿಡೇಟ್ ಆಗಿ ಕಂದಾಯವನ್ನು ಏತಕ್ಕೆ ವಸೂಲಿ ಮಾಡಬಾರದೆಂದು ಮಾನ್ಯ ಶಿವಪ್ಪನವರು ಕೇಳಿದರು.

ಶ್ರೀ ಎಲ್. ಶ್ರೀಕಂಠಯ್ಯ.—ಈ ವಿಚಾರದಲ್ಲಿ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾಧಿಕಾರಿಯವರು. ಸಬ್–ಡಿವಿಜನ್ ಆಫೀಸರ್, ಸ್ಥಳದ ಎಂ. ಎಲ್. ಎ., ಎಂ. ಎಲ್. ಸಿ. ಮತ್ತು ಎಂ. ಪಿ ಅವರುಗಳನ್ನು ಒಳಗೊಂಡಂತೆ ಲ್ಯಾಂಡ್ ರೆವಿನ್ಯೂ ಅಡ್ವೈಸರಿ ಕಮಿಟಿಯನ್ನು ನೇಮಕ ಮಾಡಿದರೆ ಅವರು ಎಲ್ಲವನ್ನು ವಿಚಾರ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಆ ರೀತಿ ಒಂದು ಸಲಹಾ ಸಮಿತಿಯನ್ನು ನೇಮಕ ಮಾಡುತ್ತೀರಾ?

ಶ್ರೀ ಎಚ್. ವಿ. ಕೌಜಲಗಿ.—ಆ ಬಗ್ಗೆ ವಿಚಾರ ಮಾಡುತ್ತೇನೆ. ಜನರಿಗೆ ತೊಂದರೆ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ಈಗ ರೈತರು ಉಪಯೋಗಿಸಿಕೊಂಡ ನೀರಿಗೆ ಮಾತ್ರ ತೆರಿಗೆ ಕೊಟ್ಟರೆ ಸಾಕಾಗಿದೆ

ಶ್ರೀ ಎನ್. ಎ ಚೆನ್ನೇಗೌಡ.—ಹಿಂದಿನ ಬಾಕಿಯನ್ನು ವಸೂಲಿ ಮಾಡುವುದನ್ನು ಕೈಬಿಡುತ್ತೀರಾ?

ಶ್ರೀ ಎಂ. ಕೆ ಬೊಮ್ಮೇಗೌಡ.—ಈಗ ೧೦೦ ಎಕರೆಯೊಳಗೆ ಇರುವವರಿಗೂ ಒಂದೇ ರೀತಿ ವಾಟರ್ ರೇಟ್ ಹಾಕುತ್ತಿದ್ದೀರಿ, ೧೦೦ ಎಕರೆಗಿಂತ ಜಾಸ್ತಿ ಜಮೀನು ಇರುವವರಿಗೂ ಕೂಡ ಒಂದೇ ರೀತಿ ವಾಟರ್ ರೇಟ್ ಹಾಕುತ್ತಿದ್ದೀರಿ, ಈ ಒಂದು ತಾರತಮ್ಯವಾದರು ಏತಕ್ಕೆ?

ಶ್ರೀ ಎಂ. ಎನ್. ರಾಮಣ್ಣ.—ಈ ವಿಚಾರದಲ್ಲಿ ಚೌಕಾಸಿ ಮಾಡಬೇಕಾದ ಪ್ರಶ್ನೆ ಏನೂ ಇಲ್ಲ. ವಾಟರ್ ರೇಟ್ ಬಗ್ಗೆ ತಾವು ತಾಲ್ಲೂಕ್ ಮಟ್ಟದಲ್ಲಿ ಒಂದು ಕಮಿಟಿಯನ್ನು ಮಾಡುವುದು ಒಳ್ಳೆಯದು. ಇಲ್ಲದಿದ್ದರೆ ದುಷ್ಪರಿಣಾಮವಾಗುತ್ತದೆ.

ಶ್ರೀ ಹಂಜಿ ಶಿವಣ್ಣ.—ಈ ವಿಚಾರದಲ್ಲಿ ತಾವು ಪುನರ್‌ಪರಿಶೀಲನೆ ಮಾಡುತ್ತೇನೆಂದು ಭರವಸೆ ಕೊಟ್ಟರೆ ಒಳ್ಳೆಯದು, ಇಲ್ಲದಿದ್ದರೆ ವೀರೇಂದ್ರ ಪಾಟೀಲರ ಮಂತ್ರಿ ಮಂಡಲದಲ್ಲಿ ಈ ಖಾತೆಯನ್ನು ಹೊತ್ತಿರುವ ನಿಮಗೆ ರೈತರ ಪಾಪದ ಹೊರೆ ತಟ್ಟುತ್ತದೆ. ಈಗ ರೈತರ ಪರಿಸ್ಥಿತಿ ತುಂಬ ಹದಗೆಟ್ಟಿದೆ. ಆದ್ದರಿಂದ ಹಿಂದಿನ ಕಂದಾಯವನ್ನೇ ವಸೂಲಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬೋಳಾರಘುರಾಮಶೆಟ್ಟಿ.—ನೀರಾವರಿ ಕಾಮಗಾರಿ ಮಾಡಿಸಿರುವ ಕಡೆ ನೀರಾವರಿ ತೆರಿಗೆಯನ್ನು ಹಾಕಬಹುದು. ಆದರೆ ನೀರಾವರಿ ಕಾಮಗಾರಿ ಇಲ್ಲದಕಡೆ ಕೂಡ ತೆರಿಗೆಯನ್ನು ಹಾಕುತ್ತಿದ್ದೀರಿ. ಇದನ್ನು ಯಾವ ಕಾನೂನು ಪ್ರಕಾರ ಹಾಕಿದ್ದೀರಿ. ಈ ಬಗ್ಗೆ ಸಂಬಂಧಪಟ್ಟ ರೈತರು ಕೋರ್ಟಿಗೆ ಹೋಗಿ ತಮ್ಮ ಹಕ್ಕನ್ನು ಪಡೆಯುವುದಕ್ಕೆ ಅವಕಾಶವಿದೆ. ಆದ್ದರಿಂದ ನೀರಾವರಿ ಕಾಮಗಾರಿ ಮಾಡಿಸದಿರುವ ಕಡೆ ವಾಟರ್ ಟ್ಯಾಕ್ಸ್ ಹಾಕುವುದು ನ್ಯಾಯಬದ್ಧವೆ ಎಂಬುದನ್ನು ಸರ್ಕಾರದವರು ವಿಚಾರ ಮಾಡಬೇಕು.

MR. DEPUTY SPEAKER.—In view of the lengthy discussion and the statement made by the Hon'ble Revenue Minister, I am not giving my consent to the adjournment motion. We have discussed the issue fully.

ಶ್ರೀ ಕೆ. ಎಚ್ ಶ್ರೀನಿವಾಸ್.—ಅಡ್ಜರ್ನ್‌ಮೆಂಟ್ ಮೋಷನ್ ನನ್ನ ಹೆಸರಿನಲ್ಲಿರುವುದರಿಂದ ನನಗೆ ಇನ್ನೊಂದು ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡಬೇಕು. ಮಾನ್ಯಮಂತ್ರಿಯವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಶಿವಮೊಗ್ಗದ ಒಂದನೇ ಜೋನ್‌ನಲ್ಲಿ ಹೊಸ ಕಂದಾಯಕ್ಕೆ ಬದಲು ಹಳೆಯ ಕಂದಾಯವನ್ನೇ ವಸೂಲಿ ಮಾಡುವಂತೆ ಅಲ್ಲಿಯ ಜಿಲ್ಲಾಧಿಕಾರಿಯವರಿಗೆ ಆದೇಶ ಕಳುಹಿಸಿಕೊಡುತ್ತೀರಾ?

SRI. B. B. SAYANKA.—Sir, I rise to a point of order. When the Ruling has been given, there must be an end to the discussion.

MR. DEPUTY SPEAKER:—I uphold the point of Order.

CALLING ATTENTION TO A MATTER OF URGENT PUBLIC IMPORTANCE.

Regarding Perchase of Sugar Cane by Thungabhadra Sugar Co Shimoga

ಶ್ರಿ ಹಂಜಿ. ಶಿವಣ್ಣ.—ಸ್ವಾಮಿ, ನಾನು ಜರೂರಾದ ಸಾರ್ವಜನಿಕ ಪ್ರಾಮುಖ್ಯತೆ ವಿಚಾರವೊಂದನ್ನು ಎಂದರೆ ಶಿವಮೊಗ್ಗದಲ್ಲಿರುವ ತುಂಗಭದ್ರಾ ಸಕ್ಕರೆ ಕಂಪನಿಯವರು ಕಬ್ಬನ್ನು ಕೊಳ್ಳುವಲ್ಲಿ ಇರುವ ತಾರತಮ್ಯದ ವಿಚಾರವನ್ನು ಕೈಗಾರಿಕೆ, ವಾರ್ತಾ ಮತ್ತು ಪ್ರಸಾರ ಮಂತ್ರಿಗಳ ಗಮನಕ್ಕೆ ತರುತ್ತೇನೆ:—

ಶ್ರೀ ಎಂ ರಾಜಶೇಖರಮೂರ್ತಿ.—ಭಾರತ ಸರ್ಕಾರದ ೧೯೬೬ನೇ ಇಸವಿ ಜುಲೈ ೧೬ನೇ ದಿನಾಂಕದ ಜಿ. ಎಸ್. ಆರ್. ೧೧೨೭ನೆಯ ಅಧಿಸೂಚನೆಯೊಡನೆ ಓದಿಕೊಳ್ಳತಕ್ಕ ೧೯೬೬ನೇ ಇಸವಿಯ ಕಬ್ಬು ನಿಯಂತ್ರಣಾದೇಶದಿಂದ ವಹಿಸಿಕೊಟ್ಟಿರುವ ಅಧಿಕಾರಗಳನ್ನು ಪ್ರಯೋಗಿಸಿ ಮೈಸೂರು ಸರ್ಕಾರದವರು ೧೯೬೬ನೇ ಇಸವಿಯ ಕ್ರಷರುಗಳ ಲೈಸನ್ಸ್ ನೀಡಿಕೆ ಆದೇಶವನ್ನು ಹೊರಡಿಸಿರುತ್ತಾರೆ.

ಮೇಲ್ಕಂಡ ಆದೇಶದ ೩ನೇ ಖಂಡಕ್ಕೆ ಅನುಸಾರವಾಗಿ, ಯಾವನೇ ವ್ಯಕ್ತಿಯು, ಯಾವುದೇ ಮೀಸಲು ಪ್ರದೇಶದಲ್ಲಿ ಮತ್ತು ಅಂತಹ ಮೀಸಲು ಪ್ರದೇಶಗಳ ಎಲ್ಲೆಗಳಿಂದ ೨೦ ಮೈಲಿ ದೂರದೊಳಗಿರುವ ಯಾವುದೇ ಪ್ರದೇಶದಲ್ಲಿ ಒಬ್ಬ ಕಬ್ಬಿನ ಬೆಳೆಗಾರನಿಗೆ ಇಲ್ಲವೇ ಬೆಳೆಗಾರರ ಗುಂಪಿಗೆ ಸೇರಿದಲ್ಲದ ಪವರ್ ಕ್ರಷರ್ ಅಥವಾ "ಖಂಡಸಾರಿ ಯೂನಿಟ್" ಅಥವಾ ಕ್ರಷರನ್ನು, ಡೆಪ್ಯೂಟಿ ಕಮಿಷನರವರು ನೀಡಿದ ಲೈಸನ್ಸ್‌ನಲ್ಲಿರುವ ಷರತ್ತುಗಳ ಮೇರೆಗೆ ಮತ್ತು ಅವುಗಳಿಗನುಸಾರವಾಗಿ ಹೊರತು, ನಡೆಸತಕ್ಕದಲ್ಲ.

೧೯ನೇ ಆಗಸ್ಟ್ ೧೯೬೯ನೇ ದಿನಾಂಕದ ಸಿ. ಐ. ೯೭ ಡಿ. ಎಸ್. ಎಫ್. ೬೯ನೇ ಕ್ರಮಾಂಕದಲ್ಲಿ ಹೊರಡಿಸಿದ ೧೯೬೬ನೇ ಇಸವಿಯ ಮೈಸೂರು ಕಬ್ಬು (ಹಂಚಿಕೆ ವಿನಿಯಮನ) (ಶಿವಮೊಗ್ಗ) ಆದೇಶವು ಶಿವಮೊಗ್ಗದ ತುಂಗಭದ್ರಾ ಸಕ್ಕರೆ ಕಾರ್ಖಾನೆಯ ಕಾರ್ಯಕ್ಷೇತ್ರವನ್ನು ತಿಳಿಸಿದೆ, ಆ ದೇಶದ ೩ನೇ ಖಂಡದ (೧)ನೇ ಉಪಖಂಡದ ಮೇರೆಗೆ ಈ ಸಕ್ಕರೆ ಕಾರ್ಖಾನೆಯು ಆದೇಶದ ಅನುಸೂಚಿಯಲ್ಲಿ ಹೇಳಿರುವ ಪ್ರದೇಶದಿಂದ ಸಕ್ಕರೆಯನ್ನು ಪಡೆದುಕೊಳ್ಳತಕ್ಕದ್ದು ಈ ಆದೇಶವಲ್ಲಿ, ಈ ಮುಂದಿನ ತಾಲ್ಲೂಕುಗಳಲ್ಲಿರುವ ಕೆಲವು ಗ್ರಾಮಗಳನ್ನು ಮೀಸಲಿರಿಸಿದೆ.

(೧) ಶಿವಮೊಗ್ಗ ತಾಲ್ಲೂಕ್, (೨) ಹೊನ್ನಾಳಿ ತಾಲ್ಲೂಕ್:

(೩) ಶಿಕಾರಿಪುರ ತಾಲ್ಲೂಕ್; (೪) ಭದ್ರಾವತಿ ತಾಲ್ಲೂಕ್: